ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೬೧ Volume 161	ಬೆಳಗಾವಿ, ಮಂಗಳವಾರ, ೨೫ ಆಗಸ್ಟ್, ೨೦೨೬ (ಭಾದ್ರಪದ ೦೩, ಶಕ ವರ್ಷ ೧೯೪೮) Belagavi, Tuesday, 25 August, 2026 (Bhadrapada 03, Shaka Varsha 1948)	ಸಂಚಿಕೆ – ೬೪ Issue - 64

ಭಾಗ ೬ಬಿ

ಬೆಳಗಾವಿ ವಿಭಾಗಕ್ಕೆ ಮತ್ತು ಧಾರವಾಡ, ಹಾವೇರಿ, ಗದಗ, ಬೆಳಗಾವಿ, ವಿಜಯಪುರ, ಬಾಗಲಕೋಟೆ ಮತ್ತು ಉತ್ತರ ಕನ್ನಡ ಜಿಲ್ಲೆಗಳಿಗೆ ಸ್ಥಳೀಯವಾಗಿ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು ಶಾಸನಬದ್ಧವಲ್ಲದ ಆದರೆ ಜಮೀನು ಸಂಗ್ರಹಣ ಶಾಸನದ ಮೇರೆಗೆ ಹೊರಡಿಸಿದ ಅಧಿಸೂಚನೆಗಳ ಸಹಿತವಾಗಿ ಸರ್ಕಾರದ ಅಧಿಸೂಚನೆಗಳು

ಕರ್ನಾಟಕ ಸರ್ಕಾರ

GOVT OF KARNATAKA

ಜಿಲ್ಲಾಧಿಕಾರಿಗಳಕಾರ್ಯಾಲಯ, ಧಾರವಾಡಜಿಲ್ಲೆ, ಧಾರವಾಡ

OFFICE OF THE DEPUTY COMMISSIONER, DHARWAD DISTRICT, DHARAWAD

ಸಂಖ್ಯೆ:ಡಿಯುಡಿಸಿ/ಕೋ.ಪ್ರ/ವಹಿ-01/ಭಾಗ-2/2026-27 ದಿನಾಂಕ::24-08-2026

ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಅಯೋಧ್ಯಾ ಗ್ರಾಮದ ನೇಕಾರ ನಗರದ ಕೊಳಚೆ ಪ್ರದೇಶದ ರಿ.ಸ.ನಂ.37/3ಎರಲ್ಲಿ 6ಎ-18ಗುಂ-15ಆಣೆ ಮತ್ತುರಿ.ಸ.ನಂ.37/2ಬಿರಲ್ಲಿ 1ಎ-26 ಗುಂ-08 ಆಣೆ ಜಮೀನಿಗೆ ಕರ್ನಾಟಕ ಕೊಳಚೆ ಪ್ರದೇಶಗಳ (ಸುಧಾರಣೆಮತ್ತುನಿರ್ಮೂಲನೆ) ಕಾಯ್ದೆ ಕಲಂ-20 ರ ಪ್ರಕಾರ ಭೂಪರಿಹಾರ ಮೊತ್ತ ನಿಗದಿಪಡಿಸುವ ಆದೇಶ

ಉಪಸ್ಥಿತರು :

ಶ್ರೀಮತಿ ಸ್ನೇಹಲ್. ಆರ್ (ಭಾ.ಆ.ಸೇ)
ಜಿಲ್ಲಾಧಿಕಾರಿ, ಧಾರವಾಡ ಹಾಗೂ ನಿಯಮಿಸಿದ ಪ್ರಾಧಿಕಾರ

ಅರ್ಜಿದಾರರು :
ಭೂಮಾಲಿಕರು/ವಾರಸುದಾರರು
1. ಶ್ರೀಮತಿ ಅನ್ನಪೂರ್ಣ ಕೋಂ ನಿಂಗಪ್ಪ ವಾಲೀಕಾರ
2. ಶ್ರೀ ಕುಮಾರ ನಿಂಗಪ್ಪ ವಾಲಿಕಾರ ಉರ್ಫ ತಳವಾರ
3. ಶ್ರೀ ಗಂಗಾಧರ ನಿಂಗಪ್ಪ ವಾಲಿಕಾರ ಉರ್ಫ ತಳವಾರ

ಎದುರುದಾರರು :

ಅಧಿಕಾರಿಗಳು

1. ಆಯುಕ್ತರು, ಹು-ಧಾ ಮಹಾನಗರ ಪಾಲಿಕೆ ಹುಬ್ಬಳ್ಳಿರವರ ಪರವಾಗಿ ಉಪಆಯುಕ್ತರು (ಕಂದಾಯ) ಹು-ಧಾ ಮಹಾನಗರ ಪಾಲಿಕೆ
2. ಉಪ ವಿಭಾಗಾಧಿಕಾರಿಗಳು, ಧಾರವಾಡ
3. ತಹಶೀಲ್ದಾರರು, ಹುಬ್ಬಳ್ಳಿರವರ ಪರವಾಗಿ ತಹಶೀಲ್ದಾರ (ಗ್ರೇಡ-2) ಹುಬ್ಬಳ್ಳಿ
4. ಕಾರ್ಯಪಾಲಕ ಅಭಿಯಂತರರು, ಕರ್ನಾಟಕಕೊಳಗೇರಿ ಅಭಿವೃದ್ಧಿ ಮಂಡಳಿ ಧಾರವಾಡ

ಪ್ರಸ್ತಾವನೆ :

ಆಯುಕ್ತರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಬೆಂಗಳೂರುರವರ ಪತ್ರ ಸಂಖ್ಯೆಕಕೊಅಮ/ಕಂ-2/11/2014-15 ದಿನಾಂಕ:31-07-2026 ರಂತೆ ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ ಧಾರವಾಡರವರಿಗೆ ಬರೆದ ಪತ್ರದಲ್ಲಿ; ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯ ಧಾರವಾಡ ಪೀಠದಲ್ಲಿ ದಾಖಲಾಗಿರುವ ನ್ಯಾಯಾಂಗ ನಿಂದನೆ ಪ್ರಕರಣ ಸಂಖ್ಯೆ: 100393/2025 ನೇದ್ದಕ್ಕೆ ಸಂಬಂಧಿಸಿದಂತೆ, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಅಯೋಧ್ಯಾ ಗ್ರಾಮದ ನೇಕಾರ ನಗರದ ಕೊಳಚೆ ಪ್ರದೇಶ ದರಿ.ಸ.ನಂ.37/3ಎರಲ್ಲಿ 6ಎ-18ಗುಂ-15ಆಣೆ ಮತ್ತು ರಿ.ಸ.ನಂ.37/2ಬಿರಲ್ಲಿ 1ಎ-26ಗುಂ-08 ಆಣೆ ಜಮೀನಿಗೆ ಮಂಡಳಿ ಕಾಯ್ದೆ ಕಲಂ-20 ರ ಪ್ರಕಾರ ಭೂಪರಿಹಾರ ಮೊತ್ತ ರೂ.26,70,000/- (ಸೆಸ್ಸುಗಳನ್ನು ಹೊರತುಪಡಿಸಿ) ನಿಗಧಿಪಡಿಸಿರುವಂತೆ, ಸದರಿ ಮೊತ್ತಕ್ಕೆ ಡಿಡಿ ಪಡೆದು ಮಾನ್ಯ ಉಚ್ಚನ್ಯಾಯಾಲಯ ಧಾರವಾಡ ಪೀಠದಲ್ಲಿ ಠೇವಣಿ ಮಾಡಲಾಗಿರುತ್ತದೆ.

ಸದರಿ ನ್ಯಾಯಾಂಗ ನಿಂದನಾ ಪ್ರಕರಣದಲ್ಲಿ ಕರ್ನಾಟಕ ಕೊಳಗೆರಿ ಅಭಿವೃದ್ಧಿ ಮಂಡಳಿ ಕಾಯ್ದೆಯ ಕಲಂ 20(2) ರಡಿ ಹೊರಡಿಸಲಾದಗೆ ಜೆಟ ಅಧಿಸೂಚನೆ ಪ್ರತಿಯನ್ನು ಸಲ್ಲಿಸಲು ದಿನಾಂಕ:13-08-2026 ರ ವರೆಗೆ ಅಂತಿಮ ಕಾಲಾವಕಾಶ ನೀಡಲಾಗಿದೆ.

ಮುಂದುವರೆದು, ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನೆ) ಕಾಯ್ದೆಕಲಂ-18 ರಿಂದ 27 ರವರೆಗೆ ನಿಯಮಿಸಿದ ಪ್ರಾಧಿಕಾರ (Prescribed Authority) ಯನ್ನು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳನ್ನು ಸರ್ಕಾರವು ನೇಮಿಸಿರುತ್ತದೆ. ಮಂಡಳಿ ಕಾಯ್ದೆಕಲಂ-20 (2) ರ ವಿವರಣೆಯು ಈ ಕೆಳಕಂಡಂತಿದೆ.

"(2) The prescribed authority shall, after holding an enquiry in the prescribed manner, determine by order the amount payable under sub-section (1) and publish the said order in the official Gazette. A copy of the said order shall be communicated to the owner of the land and every person interested therein."

ಆದ್ದರಿಂದ, ಈ ವಿಷಯವನ್ನು ಪರಿಶೀಲಿಸಿ ಮಂಡಳಿ ಕಾಯ್ದೆಯ ಕಲಂ-20 ರಡಿ ತಾವು ನಿಗಧಿಪಡಿಸಿರುವ ಭೂಪರಿಹಾರ ಮೊತ್ತವನ್ನು ಇದೇ ಕಾಯ್ದೆಯ ಕಲಂ-20 (2) ರ ಅನುಸಾರ ನಿಯಮಾನುಸಾರ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿ, ಪ್ರಕಟಿತ ರಾಜ್ಯಪತ್ರದ ಪ್ರತಿಯನ್ನು ತುರ್ತಾಗಿ ಅಪರ ಸರ್ಕಾರಿ ವಕೀಲರ ಮುಖಾಂತರ ಮಾನ್ಯ ಉಚ್ಚನ್ಯಾಯಾಲಯಕ್ಕೆ ಸಲ್ಲಿಸಿ, ಅದರ ಪ್ರತಿಯನ್ನು ಈ ಕಛೇರಿಗೆ ಕಳುಹಿಸಿಕೊಡಲು ಪತ್ರದಲ್ಲಿ ಕೋರಲಾಗಿರುತ್ತದೆ.

ಅದರಂತೆ, ಸದರಿ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಅಯೋಧ್ಯಾ ಗ್ರಾಮದ ನೇಕಾರ ನಗರದ ಕೊಳಚೆ ಪ್ರದೇಶ ದರಿ.ಸ.ನಂ.37/3ಎರಲ್ಲಿ 6ಎ-18ಗುಂ-15 ಆಣೆ ಮತ್ತು ರಿ.ಸ.ನಂ.37/2ಬಿರಲ್ಲಿ 1ಎ-26ಗುಂ-08 ಆಣೆ ಜಮೀನಿಗೆ ಕರ್ನಾಟಕ ಕೊಳಚೆ ಪ್ರದೇಶಗಳ (ಸುಧಾರಣೆ ಮತ್ತು ನಿರ್ಮೂಲನೆ) ಕಾಯ್ದೆ 1973 ರ ಕಲಂ 20 ರ ಪ್ರಕಾರ ಭೂಪರಿಹಾರ ಮೊತ್ತ ನಿಗದಿಪಡಿಸಲು ಅದೇ ಕಾಯ್ದೆಯ ಕಲಂ 20(2) ರಡಿ ವಿಚಾರಣೆಯನ್ನು ದಿನಾಂಕ:11-08-2026 ರ ಮದ್ಯಾಹ್ನ 3:30 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಧಾರವಾಡದಲ್ಲಿ ನಿಗದಿಪಡಿಸಿ ಸೂಚನಾ ಪತ್ರವನ್ನು ಭೂಮಾಲಿಕರಿಗೆ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಜಾರಿ ಮಾಡಲಾಗಿರುತ್ತದೆ.

ದಿನಾಂಕ 11.08.2026 ರ ವಿಚಾರಣೆ.

ದಿನಾಂಕ: 11-08-2026 ರ ಮದ್ಯಾಹ್ನ 3:30 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಧಾರವಾಡದಲ್ಲಿ ನಡೆದ ವಿಚಾರಣೆ ಸಂಧರ್ಭದಲ್ಲಿ ರಿಸ ನಂ 37/3ಎ ಕ್ಷೇತ್ರ6ಎ-18ಗುಂ-15 ಆಣೆ ನೇದ್ದಕ್ಕೆ ಸಂಬಂಧಿಸಿದಂತೆ, ಭೂಮಾಲಿಕರ ವಾರಸುದಾರರಾದ ಶ್ರೀ ಕುಮಾರ ನಿಂಗಪ್ಪ ವಾಲಿಕಾರ ಉರ್ಫತಳವಾರ ಮತ್ತು ಶ್ರೀಮತಿ ಅನ್ನಪೂರ್ಣ ಕೋಂ ನಿಂಗಪ್ಪ ವಾಲಿಕಾರ ಉರ್ಫ ತಳವಾರ ಇವರು ಹಾಗೂ ರಿ.ಸ.ನಂ.37/2ಬಿರಲ್ಲಿ 1ಎ-26ಗುಂ-08 ಆಣೆ ಜಮೀನಿಗೆ ಸಂಭಂದಿಸಿದಂತೆ ಮಾಲಿಕರ ವಾರಸುದಾರರಾದ ಶ್ರೀ ಗಂಗಾಧರ ನಿಂಗಪ್ಪ ವಾಲಿಕಾರ ಉರ್ಫ ತಳವಾರರವರುಗಳು ಹಾಜರಾಗಿರುತ್ತಾರೆ.

ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿ ಪರವಾಗಿ, ಕಾರ್ಯನಿರ್ವಾಹಕ ಅಭಿಯಂತರರು, ಧಾರವಾಡ ಹಾಗೂ ಹು-ಧಾ ಮಹಾನಗರ ಪಾಲಿಕೆ ಪರವಾಗಿ ಉಪಆಯುಕ್ತರು, (ಕಂದಾಯ), ರವರು ಹಾಜರಾಗಿರುತ್ತಾರೆ.

ಶ್ರೀ ಕುಮಾರ ನಿಂಗಪ್ಪ ವಾಲಿಕಾರ ಉರ್ಫ ತಳವಾರ (**A1**) ರವರು ಕೊಳಚೆ ಪ್ರದೇಶ ಘೋಷಣೆ ಕುರಿತು ಸ್ವಾಧಿನಪಡಿಸಿಕೊಂಡ ಭೂಮಿಗೆ ಕರ್ನಾಟಕ ಕೊಳಚೆ ಪ್ರದೇಶಗಳ (ಸುಧಾರಣೆ ಮತ್ತು ನಿರ್ಮೂಲನೆ) ಕಾಯ್ದೆ 1973 ರ ಕಲಂ 20(1) ಮತ್ತು 20(2) ರಂತೆ ಆಸ್ತಿ ತೆರಿಗೆಯ 300 ಪಟ್ಟು ಪರಿಹಾರವನ್ನು ನಿಗದಿಪಡಿಸಬೇಕಾಗಿದ್ದು, ಈ ಹಿಂದೆ ನಿಗದಿಪಡಿಸಿದ ಭೂಪರಿಹಾರದಲ್ಲಿ ದೋಷಗಳಿದ್ದು, ನಾನು ಈಗಾಗಲೇ ಜಿಲ್ಲಾಧಿಕಾರಿಗಳ ಕಚೇರಿಗೆ ದಿನಾಂಕ:04-08-2026 ರಂದು ಸಲ್ಲಿಸಿದ ಮನವಿಯನ್ನು ನನ್ನ ಲಿಖಿತ ಹೇಳಿಕೆಯೆಂದು ಪರಿಗಣಿಸಲು ಕೋರಿದರು, ಅಲ್ಲದೆ ದಿನಾಂಕ:11-08-2026 ಇನ್ನೊಂದು ಲಿಖಿತ ಹೇಳಿಕೆಯನ್ನು ಸಲ್ಲಿಸಿ, ದಿನಾಂಕ:04-08-2026 ರಂದು ಸಲ್ಲಿಸಿದ ಲಿಖಿತ ಹೇಳಿಕೆಯ ಭಾಗವೆಂದು ಪರಿಗಣಿಸಲು ವಿನಂತಿಸಿದರು.

ಶ್ರೀ ಗಂಗಾಧರ ನಿಂಗಪ್ಪ ವಾಲಿಕಾರ ಉರ್ಫ ತಳವಾರ (A2) ರವರು ಲಿಖಿತ ಹೇಳಿಕೆಯನ್ನು ದಾಖಲೆಗಳೊಂದಿಗೆ ಸಲ್ಲಿಸಿದರು.

ಶ್ರೀ ಕುಮಾರ ನಿಂಗಪ್ಪ ವಾಲಿಕಾರ ಉರ್ಫ ತಳವಾರ (A1) ರವರು ತಮ್ಮ 6 ಎಕರೆ ಜಮೀನಿಗೆ ಅಂದಾಜು 100 ಕೋಟಿ ರೂಪಾಯಿಗಳ ಪರಿಹಾರವನ್ನು ನೀಡಲು, ಹಾಗೂ ಶ್ರೀಗಂಗಾಧರ ನಿಂಗಪ್ಪ ವಾಲಿಕಾರ ಉರ್ಫ ತಳವಾರ (ಎ-2) ರವರು ತಮ್ಮ 1ಎ-26ಗು ಜಮೀನಿಗೆ ಅಂದಾಜು 6 ಕೋಟಿ ರೂಪಾಯಿಗಳ ಪರಿಹಾರವನ್ನು ನೀಡಲು ಮನವಿ ಮಾಡಿದರು.

ಹು-ಧಾ ಮಹಾನಗರ ಪಾಲಿಕೆಯ ಉಪಆಯುಕ್ತರು, (R2) ಕಂದಾಯರವರು 1992 ರಲ್ಲಿ ಜಮೀನನ್ನು ಕೊಳಚೆ ಪ್ರದೇಶ ಎಂದು ಘೋಷಿಸುವ ಮೊದಲು ಜಮೀನಿನ ಭೂಪರಿವರ್ತನೆ ಮಾಡಲಾಗಿರಲಿಲ್ಲ ಎಂಬ ಅಂಶದ ಆಧಾರದ ಮೇಲೆ ಜಮೀನಿನ ಮೌಲ್ಯವನ್ನು ಅಂದಾಜಿಸಲಾಗಿದೆ ಎಂದು ತಿಳಿಸಿದರು.

A1 ಮತ್ತು A2 ರವರನ್ನು, ಅವರ ಜಮೀನಿನಲ್ಲಿ ಮನೆಗಳು/ವಾಸದ ಕಟ್ಟಡಗಳು ನಿರ್ಮಾಣವಾಗಲು ಅವಕಾಶ ಮಾಡಿಕೊಟ್ಟಿದ್ದು ಏಕೆ?, ತಮ್ಮ ಜಮೀನನ್ನು ಏಕೆ ರಕ್ಷಿಸಿಕೊಳ್ಳಲಿಲ್ಲ ಎಂದು ಪ್ರಶ್ನಿಸಲಾಯಿತು.

A1 ಮತ್ತು A2ಅವರು, ತಮ್ಮ ಹಿರಿಯರು ಪರಿಶಿಷ್ಟಪಂಗಡ (ST) ಸಮುದಾಯಕ್ಕೆ (ಹಿಂದೂವಾಲ್ಮೀಕಿ) ಸೇರಿದವರಾಗಿದ್ದು, ಅನಕ್ಷರಸ್ಥರಾಗಿದ್ದರು ಎಂದು ತಿಳಿಸಿದರು. ಅವರು ಕೆಲಸಕ್ಕಾಗಿ ವಿವಿಧ ಸ್ಥಳಗಳಿಗೆ ಸಂಚರಿಸುತ್ತಿದ್ದು, ಈ ವಿಷಯದ ಬಗ್ಗೆ ಅರಿವಿಲ್ಲದೆ ಇದ್ದರು ಎಂದು ತಿಳಿಸಿದರು.

ಹಾಜರಿದ್ದ ಹು-ಧಾ ಮಹಾನಗರಪಾಲಿಕೆಯ ಅಧಿಕಾರಿಗಳಿಗೆ ಮತ್ತು ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿರವರಿಗೆ ಸದರಿ ಭೂಪರಿಹಾರ ಮೊತ್ತ ನಿಗದಿಪಡಿಸಿದ್ದರ ಕುರಿತು ಸೂಕ್ತ ಸಮಜಾಯಿಷಿಯೊಂದಿಗೆ ಮುಂದಿನ ವಿಚಾರಣೆಯಲ್ಲಿ ಹಾಜರಾಗಲು ಸೂಚಿಸಿ ವಿಚಾರಣೆಯನ್ನು ದಿನಾಂಕ 19-08-2026 ಮದ್ಯಾಹ್ನ 3:30ಕ್ಕೆ ಮುಂದೂಡಲಾಯಿತು.

ದಿನಾಂಕ 19.08.2026 ರ ವಿಚಾರಣೆ.

A1 ಮತ್ತು A2 ಹಾಜರಿದ್ದರು, ಮತ್ತು R1 ಮತ್ತು R2 ಹಾಜರಿದ್ದರು.

R1 ಅವರು ಭೂಪರಿಹಾರ ನಿಗದಿಪಡಿಸಲು ತಮ್ಮ ಲಿಖಿತ ವಾದಗಳನ್ನು ಸಲ್ಲಿಸಿದರು.

R2 ಅವರು A1 ಮತ್ತು A2 ಅವರಿಗೆ ಪಾವತಿಸ ಬೇಕಾದ ಭೂಪರಿಹಾರಕ್ಕೆ ಸಂಬಂಧಿಸಿದಂತೆ ತಮ್ಮ ಲಿಖಿತ ವಾದಗಳನ್ನು ಸಲ್ಲಿಸಿದರು.

A1 ಅವರು ತಮ್ಮ ಲಿಖಿತ ಹೇಳಿಕೆಗಳನ್ನು ಸಲ್ಲಿಸಿ, ಹಿಂದಿನ ವಿಚಾರಣೆಯ ಸಂದರ್ಭದಲ್ಲಿ ಸಲ್ಲಿಸಿದ್ದ ತಮ್ಮ ಹೇಳಿಕೆಗಳು ಮತ್ತು ದಾಖಲೆಗಳೊಂದಿಗೆ ಇವುಗಳನ್ನು ಪರಿಗಣಿಸುವಂತೆ ಕೋರಿದರು. A2 ಅವರು ತಮ್ಮ ಲಿಖಿತ ಹೇಳಿಕೆಗಳು ಮತ್ತು ದಾಖಲೆಗಳನ್ನು ಸಲ್ಲಿಸಿದರು.

A1 ಮತ್ತು A2 ಅವರು, ಸುಮಾರು 2020–21 ರ ಅವಧಿಯಲ್ಲಿ ಭೂಮಿಯ ಮೌಲ್ಯವನ್ನು ಸುಮಾರು ರೂ 26 ಕೋಟಿ ಎಂದು ಅಂದಾಜಿಸಲಾಗಿತ್ತು ಎಂದು ಮೌಖಿಕವಾಗಿ ತಿಳಿಸಿದರು, ಆದರೆ ಈಗ ಸುಮಾರು ₹100 ಕೋಟಿ ಅಥವಾ ಅದಕ್ಕಿಂತ ಹೆಚ್ಚಿನ ಪರಿಹಾರವನ್ನು ಹೇಗೆ ಕೇಳುತ್ತಿದ್ದೀರಿ ಎಂದು ಪ್ರಶ್ನಿಸಿದಾಗ, ಆ ಭೂಮಿಗೆ ಅಷ್ಟು ಹೆಚ್ಚಿನ ಮೌಲ್ಯಬರುವ ಸಾಧ್ಯತೆ ಇದೆ ಎಂದು ಅವರು ತಿಳಿಸಿದರು.

ಮುಂದುವರೆದು, ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕೆ (Non-Agricultural purpose) ಪರಿವರ್ತಿಸಲಾಗಿದೆಯೇ ಎಂಬ ಪ್ರಶ್ನೆಗೆ A1 ಮತ್ತು A2 ಇಬ್ಬರೂ ಇಲ್ಲ ಎಂದು ಉತ್ತರಿಸಿದರು.

A1 ಅವರು ತಮ್ಮ ಭೂಮಿಗೆ ಸಂಬಂಧಿಸಿದಂತೆ 3 Writ Petitions (WP) ಗಳನ್ನು ದಾಖಲಿಸಿರುವುದಾಗಿ,

A2 ಅವರು ತಮ್ಮ ಭೂಮಿಗೆ ಸಂಬಂಧಿಸಿದಂತೆ 3 Writ Petitions (WP) ಗಳನ್ನು ದಾಖಲಿಸಿರುವುದಾಗಿ ತಿಳಿಸಿದರು.

ಇದಲ್ಲದೆ, ತಲಾ 3 Civil Contempt Cases, 2 Writ Appeals (WA) ಮತ್ತು 2 SLPಗಳು (ಸುಪ್ರೀಂಕೋರ್ಟ್‌ನಲ್ಲಿ) ದಾಖಲಿಸಲ್ಪಟ್ಟಿವೆ. ಇದರ ವಿವರಗಳನ್ನು ದಿನಾಂಕ 11/08/26 ರಂದು ಸಲ್ಲಿಸಲಾದ ಹೇಳಿಕೆಗಳೊಂದಿಗೆ ಲಗತ್ತಿಸಲಾಗಿದೆ ಎಂದು ತಿಳಿಸಿದರು.

R1 ಅವರು, ವಿವಿಧ ನ್ಯಾಯಾಲಯಗಳಿಂದ ಪ್ರಕರಣಗಳನ್ನು ರದ್ದುಪಡಿಸಲಾಗಿದೆ (quashed) ಮತ್ತು ಅವುಗಳನ್ನು ಪ್ರಶ್ನಿಸಲಾಗಿದೆ (challenged) ಎಂದು ತಿಳಿಸಿದ್ದಾರೆ. ಪರಿಹಾರವನ್ನು ಲೆಕ್ಕಹಾಕಲು 2018ನೇ ವರ್ಷವನ್ನು ಮೂಲ ವರ್ಷ (base year) ಎಂದು ಪರಿಗಣಿಸಲಾಗಿದೆ ಎಂದು, ಮಾನ್ಯ ನ್ಯಾಯಾಲಯದ ಮುಂದಿನ ವಿಚಾರಣೆ ದಿನಾಂಕವಾದ 27/08/26 ರೊಳಗಾಗಿ ಪರಿಹಾರದ ಮೊತ್ತವನ್ನು ನಿರ್ಧರಿಸಬೇಕು ಎಂದು ನ್ಯಾಯಾಲಯ ಸೂಚಿಸಿದೆ ಎಂದು ತಿಳಿಸಿದರು

ಈ ವಿಚಾರಣಾ ಪ್ರಕ್ರಿಯೆಯ ನಿರ್ಧಾರವನ್ನು ದಿನಾಂಕ 27/08/26 ರೊಳಗೆ ನ್ಯಾಯಾಲಯಕ್ಕೆ ತಿಳಿಸಲಾಗುವುದು ಎಂದು ತಿಳಿಸಿ ವಿಚಾರಣೆಯನ್ನು ಮುಕ್ತಾಯಗೊಳಿಸಲಾಯಿತು.

ಶ್ರೀ ಕುಮಾರ ನಿಂಗಪ್ಪ ವಾಲಿಕಾರ ಉರ್ಫ ತಳವಾರ (A1) ರವರ ಲಿಖಿತ ಹೇಳಿಕೆಗಳ ಸಾರಂಶ ಮತ್ತು ಕೋರಿಕೆ:

ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯ ಹುಬ್ಬಳ್ಳಿನಗರ ತಾಲೂಕಿನ ಅಯೋಧ್ಯಾ (ವಿ) ಗ್ರಾಮದ ರಿ.ಸ.ನಂ 37/3ಎ ಕ್ಷೇತ್ರ 6 ಎಕರೆ 32 ಗುಂಟೆ 04 ಆಣೆನೇದ್ದರ ಆಸ್ತಿಗೆ ನಾವು ಸಂಪೂರ್ಣ ಮಾಲೀಕರು ಇರುತ್ತೇವೆ. ಸದರಿ ಮೇಲ್ಕಂಡ ಆಸ್ತಿಯನ್ನು ಕರ್ನಾಟಕ ಕೊಳಚೆಪ್ರದೇಶ ಅಭಿವೃದ್ಧಿ ಮತ್ತು ನಿರ್ಮೂಲನೆ ಕಾಯ್ದೆ 1973 ರ ಕಲಂ 3 ರಡಿಯಲ್ಲಿ ಅಧಿಸೂಚನೆ ಸಂಖ್ಯೆ ಎಮಯುಎಸ್/ಬಿಜಿಎಮ್/ಸಿಆರ್/152/1989-90 ದಿನಾಂಕ;20/05/1992 ರಂದು ಕೊಳಚೆ ಪ್ರದೇಶವೆಂದು ಅಂತಿಮವಾಗಿ ಘೋಷಣೆ ಮಾಡಿದ್ದು ಇರುತ್ತದೆ.

ಸಾರ್ವಜನಿಕರಿಗೆ ವಾಂಬೆ ಯೋಜನೆಯಡಿಯಲ್ಲಿ ಮನೆಗಳನ್ನು ನಿರ್ಮಾಣ ಮಾಡಿಕೊಡಲಾಗಿದೆ ಸಾರ್ವಜನಿಕ ಶೌಚಾಲಯ, ಅಂಗನವಾಡಿ, ಸಮುದಾಯ ಭವನ ನಿರ್ಮಾಣ ಮಾಡಿಕೊಡಲಾಗಿದೆ.

ಕರ್ನಾಟಕ ಸರ್ಕಾರದ ಅಧಿಸೂಚನೆ ವಇ/102/ಎಸ್.ಬಿ.ಎಂ/2020 ದಿನಾಂಕ: 18/10/2004 ರಲ್ಲಿ ಸದರಿ ರಿ.ಸ.ನಂನಲ್ಲಿ ಸ್ವಾಧೀನ ಪತ್ರವನ್ನು ನೀಡಲು ಸಮೀಕ್ಷೆ ನಡೆಸಿ ಜನರಿಗೆ ಚಕಬಂದಿ ಹಾಕಿ 474 ಸ್ವಾಧೀನ ಪತ್ರಗಳನ್ನು ನೀಡುವ ಮೂಲಕ ಸ್ವಾಧೀನವನ್ನು ಖಚಿತಪಡಿಸಿರುತ್ತಾರೆ.

37 ವರ್ಷಗಳ ಹಿಂದೆ ಆದಾಯದ ಮೂಲವಾದ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಜನರಿಗೆ ನೀಡಿದ್ದು ಇರುತ್ತದೆ. ಕರ್ನಾಟಕ ಮಹಾನಗರಪಾಲಿಕೆ ಅಧಿನಿಯಮ 1976 ರ ಅನುಗುಣವಾಗಿ ವಸತಿ/ವಾಣಿಜ್ಯ/ಬಹುಮಹಡಿ ಖಾಲಿ ನಿವೇಶನ ಸಾರ್ವಜನಿಕ ಉಪಯೋಗಿ, ಸಮುದಾಯಭವನ, ಕಟ್ಟಡಸೆಟ್ಬ್ಯಾಕ್, ಶೌಚಾಲಯ, ಅಂಗನವಾಡಿ ಕಟ್ಟಡ, ರಸ್ತೆಗಳು, ಗಟಾರಗಳು ಒಳಚರಂಡಿ ವ್ಯವಸ್ಥೆ ವಿದ್ಯುತಕಂಬ, ಟ್ರಾನ್ಸಫಾರ್ಮರಗಳು ಮಾರುಕಟ್ಟೆ ದರಗಳನ್ವಯ ವ್ಯವಸ್ಥಿತ ಆಸ್ತಿ ತೆರಿಗೆ ಕ್ರೋಢಿಕೃತ ದರಗಳನ್ವಯ ಸರಕಾರದ ಸುತ್ತೋಲೆಗಳನ್ನು ಎಚ್.ಡಿ.ಎಂ.ಸಿ ಠರಾವು ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮವಹಿಸುವುದು. ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮತ್ತು ನಿರ್ಮೂಲನಾ ಕಾಯ್ದೆ 1973 ಕಲಂ 24 ರ ಪ್ರಕಾರ ಸ್ವಾಧೀನದಿನದಿಂದ ಆದೇಶ (ಅವಾರ್ಡ) ಮಾಡುವವರೆಗಿನ ಬಡ್ಡಿಯನ್ನು ಹಾಗೂ ಪರಿಹಾರವನ್ನು ಆದಷ್ಟು ಬೇಗನೆ ಮೌಲ್ಯ ಮಾಪನಮಾಡಿ ಪಾವತಿಸಬೇಕಾಗಿ ವಿನಂತಿ ಇರುತ್ತದೆ.

ಸದರಿ ರಿ.ಸ.ನಂ 37/3ಅ ಮೂಲತಃ ಅಧಿಸೂಚನೆ ಕೊಳಚೆ ಪ್ರದೇಶವು 6 ಎಕರೆ 32 ಗುಂಟೆ 4 ಆಣಿ ಇದ್ದು, ಅದರಲ್ಲಿ 14 ಗುಂಟೆ (ದಕ್ಷಿಣಭಾಗ) ಸದರಿ ಜಮೀನಿನ ಮಾಲೀಕರ ವೈಯಕ್ತಿಕ ಉದ್ಯೋಗದಲ್ಲಿದೆ.

ಸದರಿ ರಿ.ಸ.ನಂ 37/3ಅ ನೇದ್ದರಲ್ಲಿ ದಿನಾಂಕ: 27/01/2022 ರಂದು 12 ಗುಂಟೆಗಳು (1213 ಚ.ಮೀ) ಪ್ರದೇಶವನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಸ್ವಾಧೀನಪಡಿಸಿಕೊಳ್ಳಲು ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಆವಾರ್ಡ ಸಹ ಮಾಡಲಾಗಿರುತ್ತದೆ. ಸ್ವಾಧೀನವನ್ನು ತೆಗೆದುಕೊಂಡಿರುತ್ತಾರೆ. ಆರ್.ಟಿ.ಸಿ. ಉತಾರದಲ್ಲಿ ರಾಷ್ಟ್ರೀಯ ಹೆದ್ದಾರಿಯವರು ತಮ್ಮ ಹೆಸರನ್ನು ಸಹನೋಂದಾಯಿಸಿಕೊಂಡಿರುತ್ತಾರೆ.

ಸದರಿ ರಿ.ಸ.ನಂ: 37/3ಅ ನೇದ್ದರಲ್ಲಿ 6 ಗುಂಟೆ 04 ಆಣಿ (ಉತ್ತರಭಾಗ) ಪ್ರದೇಶವನ್ನು ರಣದಮ್ಮ ಗ್ರಾಮದೇವಿ ದೇವಸ್ಥಾನವಾಗಿ ಬಳಸಲಾಗುತ್ತದೆ. ಸದರಿ ಜಮೀನು ಮಾಲೀಕರ ತಾಬಾದಲ್ಲಿಉಸ್ತುವಾರಿಯಲ್ಲಿಇರುತ್ತದೆ.

ಆದ್ದರಿಂದ ಸದರಿ ರಿ.ಸ.ನಂ 37/3ಅ ನೇದ್ದರಲ್ಲಿ 6 ಎಕರೆ 00 ಗುಂಟೆ 00 ಆಣೆಅಂದರ 2,61,360 (ಎರಡು ಲಕ್ಷ ಅರವತ್ತೊಂದು ಸಾವಿರದ ಮೂರು ನೂರಾ ಅರವತ್ತು) ಚದರ ಅಡಿಪ್ರದೇಶಕ್ಕೆ ಅರ್ಜಿದಾರರಿಗೆ ಪರಿಹಾರವನ್ನು ಪ್ರಮಾಣೀಕರಿಸಲು ಮತ್ತು ಪಾವತಿಸಲು ಮನವಿ ಇರುತ್ತದೆ.

ಈ ಹಿಂದೆ ಭೂಪರಿಹಾರವನ್ನು ನಿರ್ಧರಿಸಿದ್ದು ಅದರ ಪತ್ರಸಂಖ್ಯೆ: ಯುಡಿಸಿ/ ಕೊ.ಪ್ರ/ವಹಿ/1/2020-21/985 ದಿನಾಂಕ: 25/02/2021 ಪತ್ರದಲ್ಲಿ ಕೊಳಚೆ ಪ್ರದೇಶದಲ್ಲಿ ಅಭಿವೃದ್ಧಿ ಮತ್ತು ನಿರ್ಮೂಲನಾ ಕಾಯ್ದೆ 1973 ರ ಕಲಂ 20 ರನ್ವಯ ಜಮೀನಿಗೆಸನ್ 2020-21 ನೇ ಸಾಲಿನ ಆಸ್ತಿ ತೆರಿಗೆ ಮೊತ್ತದ 300 ಪಟ್ಟು ಭೂಪರಿಹಾರದ ಮೊತ್ತವನ್ನು ನಿರ್ಧರಿಸಲಾಗಿರುತ್ತದೆ. ಇದರ ಅನ್ವಯ ಸದರಿ ರಿ.ಸ.ನಂಬರಿಗೆ ಆಸ್ತಿ ತೆರಿಗೆಯು 7,21,908/- ಆಗುತ್ತದೆ. ಇದರ 300 ಪಟ್ಟು ರೂ 21,65,72,400/- ಗಳಾಗುತ್ತದೆ.

ಪತ್ರ ಸಂಖ್ಯೆ: ಡಿಯುಡಿಸಿ/ಕೋಪ/ವಹಿ/2025-26/1889 ದಿನಾಂಕ: 16/02/2026 ಜಿಲ್ಲಾಧಿಕಾರಿ ಧಾರವಾಡ ಜಿಲ್ಲೆರವರ ಪತ್ರ ಮತ್ತು ಪತ್ರದ ಸಂಖ್ಯೆ:ಎಚ್ಡಿಎಮ್ಸಿ/30/(ಭೂಮಿ)/2025-26 ಹುಬ್ಬಳ್ಳಿ ದಿನಾಂಕ: 16/02/2026 ರ ಪತ್ರಗಳಲ್ಲಿ ಸದರಿ ರಿ.ಸ.ನಂ. 37/3ಅ ನೇದ್ದಕ್ಕೆ ಸೆಸ್ ಒಳಗೊಂಡು ರೂ.7,241/- ಗಳಾಗುತ್ತದೆ. ಸೆಸ್ಹೊರತು ಪಡಿಸಿ ಆಸ್ತಿ ತೆರಿಗೆ ರೂ.5,740/- ಗಳು ಆಗುತ್ತದೆ. ರಿ.ಸ.ನಂ. 37/2ಬ ರೂ. 3,973/- ಗಳು ಸೆಸ್ ಒಳಗೊಂಡು, ಸೆಸ್ಹೊರತುಪಡಿಸಿ ಆಸ್ತಿ ತೆರಿಗೆ ರೂ.3,153/- ಗಳು ಆಗುತ್ತದೆ. ಕರ್ನಾಟಕ ಕೊಳಚೆ ಪ್ರದೇಶಗಳ ಅಭಿವೃದ್ಧಿ ಮತ್ತು ನಿರ್ಮೂಲನಾ ಕಾಯ್ದೆ 1973 ರ ಕಲಂ 20 ರ ಅನ್ವಯಸದರಿಮೊತ್ತದ 300 ಪಟ್ಟುರೂ. 33,64,200/- ಗಳು (ಸೆಸ್ಸುಗಳನ್ನುಒಳಗೊಂಡಂತೆ) ಹಾಗೂ ಆಸ್ತಿತೆರಿಗೆ ಮೊತ್ತದ 300 ಪಟ್ಟು ರೂ. 26,70,000/- ಗಳ (ಸೆಸ್ಸುಗಳನ್ನು ಹೊರುತುಪಡಿಸಿ) ಎಂಬುವುದನ್ನು ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುವಾಗ ತಪ್ಪು ಮೆಮೋ ದಿನಾಂಕ: 08/06/2026 ರಂದು ಸಲ್ಲಿಸಿರುವುದು ಇದು ಮಾನ್ಯ ನ್ಯಾಯಾಲಯದ ಆದೇಶದ ಉದ್ದೇಶಪೂರ್ವಕ ಅವಿಧೇಯತೆಯಾಗಿದೆ. ಇದು ಕಾನೂನುಬದ್ಧ ಯೋಗ್ಯ ಪರಿಹಾರವಾಗಿರುವುದಿಲ್ಲ. ಪರಿಹಾರವನ್ನು ನಿರ್ಧರಿಸುವ ಸೂಕ್ತಮಾರ್ಗಸೂಚಿ ಮಾರ್ಗಗಳನ್ನು ಅನುಸರಿಸಿರುವುದಿಲ್ಲ. ಇದಕ್ಕೆ ದೂರುದಾರರ ಆಕ್ಷೇಪಣೆ ಇರುತ್ತದೆ. ಸದರಿ ಪ್ರಕರಣದಲ್ಲಿ ದೂರುದಾರರಾದ ನಾವು ದಿನಾಂಕ: 15/04/2026 ರಂದು ದಿನಾಂಕ: 21/02/2025 ರ ಮೆಮೋಗೆ ಆಕ್ಷೇಪಣೆಯನ್ನು ಸದರಿ ವರದಿಯ ವಿರುದ್ಧ ಮಾನ್ಯನ್ಯಾಯಾಲಯಕ್ಕೆ ಸಲ್ಲಿಸಿದ್ದು ಇರುತ್ತದೆ. ಅದರಲ್ಲಿ ಮಾರ್ಗಸೂಚಿವಿಧಾನ ದಿನಾಂಕ: 01/07/2021 ರಂದು ಉಪನೋಂದಣಿ ಅಧಿಕಾರಿಗಳ ಕಚೇರಿ ಮಿನಿ ವಿಧಾನಸೌಧ ಹುಬ್ಬಳ್ಳಿ (ದಕ್ಷಿಣ) ರವರ ಪತ್ರದ ಮಾಹಿತಿಯನ್ನು ಸಲ್ಲಿಸಲಾಗಿದೆ. ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ಕಾರ್ಯಕಲಾಪ ಪತ್ರ. ಪರಿಷತ್ಕಾರ್ಯದರ್ಶಿಯವರ ಕಚೇರಿ ದಿನಾಂಕ: 22/05/2020 ರ ಪತ್ರಗಳು ಆಸ್ತಿ ತೆರಿಗೆ ಸಂಬಂಧಿಸಿದಂತೆ ಅನ್ವಯವಾಗುವ ವರ್ಷ ಮತ್ತು ಶೇಕಡಾವಾರು ದರಗಳ ವಿವರಗಳನ್ನು ಸಲ್ಲಿಸಲಾಗಿದೆ. ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ಸ್ವಯಂ ಘೋಷಿತ ಆಸ್ತಿ ತೆರಿಗೆ ಯೋಜನೆ ಆಸ್ತಿತೆರಿಗೆ ವಿವರಪಟ್ಟಿ ನಮೂನೆ ಸಲ್ಲಿಸಲಾಗಿದೆ. ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆ ವಲಯ ಕಚೇರಿ ನಂ. 10 ರ ಪತ್ರಸಂಖ್ಯೆ: ಎಚ್ಡಿಎಮ್ಝುಡ್ 10/ಟ್ಯಾಕ್ಸ್/ವಾರ್ಡ63/2020-21 ದಿನಾಂಕ: 18/08/2020 ರ ಪತ್ರ ಸಲ್ಲಿಸಲಾಗಿದೆ. ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆವಲಯ ಕಚೇರಿ ನಂ. 10 ರ ಪತ್ರ ಸಂಖ್ಯೆ: ಎಚ್ಡಿಎಮ್ ಝುಡ್11/ಟ್ಯಾಕ್ಸ್/ವಾರ್ಡ67/2020-21 ದಿನಾಂಕ: 15/07/2020 ಇದರಲ್ಲಿ ಆಸ್ತಿತೆರಿಗೆ ಮಾರ್ಗಸೂಚಿ ದರನ್ನು ಒಳಗೊಂಡಿದೆ ಸಲ್ಲಿಸಲಾಗಿದೆ. ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಪತ್ರಸಂಖ್ಯೆ: ಕಕೋಅಮ/ ಸಕಾನಿಅ/ಗಉವಿ/ಮಾಹ/2019-20/311 ದಿನಾಂಕ: 13/02/2020 ಕೊಪ್ಪಳ ಜಿಲ್ಲೆಯ ಗಂಗಾವತಿನಗರದ ಹೆರೂರುಕಿಶನರಾವ ಕೊಳಚೆ ಪ್ರದೇಶಕ್ಕೆ ಭೂಪರಿಹಾರ ಪಾವತಿ ಜಿಲ್ಲಾಧಿಕಾರಿಯ ನಡಾವಳಿಯ ಪತ್ರಗಳು ಭೂಪರಿಹಾರ ಪಾವತಿ ಸಂಬಂಧಿಸಿದ ದಾಖಲಾತಿಗಳನ್ನು ಸಲ್ಲಿಸಲಾಗಿದೆ. ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ಪತ್ರ ಸಂಖ್ಯೆ: ಎಚ್ಡಿಎಮ್ಸಿ/ಕಂಅ/30/ಭೂಮಿ/2020-21 ದಿನಾಂಕ: 17/12/2020 ಪತ್ರ 37/3ಅ & 37/2ಬ

ಸಂಬಂಧಿಸಿದ ಭೂಪರಿಹಾರ ಮೊತ್ತ ತಯಾರಿಸಿದ ಪತ್ರ ಸಲ್ಲಿಸಲಾಗಿದೆ. ಆಯುಕ್ತರು ಕರ್ನಾಟಕ ಕೊಳಗೇರಿ ಮಂಡಳಿ ಬೆಂಗಳುರು ಪತ್ರ ಸಂಖ್ಯೆ: /-1/5-3/11/2014-15/174 : 07/01/2021 ಮೊತ್ತ ತಯಾರಿಸಿದ ಪತ್ರ ಸಲ್ಲಿಸಲಾಗಿದೆ. ದಿನಾಂಕ: 28/07/2026 ರಂದು ಮಾನ್ಯ ನ್ಯಾಯಾಲಯಕ್ಕೆ ಮಾಹಿತಿ ಹಕ್ಕುಕಾಯ್ದೆ ಅಡಿ ನೀಡಲಾದ 12 ಪತ್ರಗಳು ಅಂದರೆ ದಿನಾಂಕ: 16/02/2026 ರ ಪತ್ರ ಜಿಲ್ಲಾಧಿಕಾರಿಯಿಂದ ಆಯುಕ್ತರು ಕ.ಕೊ.ಅ.ಮಂಡಳಿ ಬೆಂಗಳೂರು ಇವರಿಗೆ ಕಳುಹಿಸಿರುವ ಪತ್ರ. ದಿನಾಂಕ: 16/02/2026 ರ ಪತ್ರ ಆಯುಕ್ತರು ಎಚ್.ಡಿ.ಎಮ್.ಸಿ. ಹುಬ್ಬಳ್ಳಿ ಜಿಲ್ಲಾಧಿಕಾರಿ ಧಾರವಾಡ ಜಿಲ್ಲೆ ಕಳುಹಿಸಿರುವ ಪತ್ರ ಮತ್ತು ಇದರಲ್ಲಿ ಪಿಐಡಿ ನಂ. ಇಲ್ಲಾ, ಎಸ್ಎಎಸ್ಐಡಿ ನಂಬರ ಇಲ್ಲಾ, ಹಳೇ ಅಸೆಸಮೆಂಟ್ನಂಬರ ಇಲ್ಲಾ, ದಿನಾಂಕ ಇಲ್ಲಾ, ಸ್ಕ್ಯಾನರ್ಇಲ್ಲಾ, ಮಹಾನಗರ ಪಾಲಿಕೆಯ ಚಿಹ್ನೆ ಇಲ್ಲಾ, ಸುಳ್ಳುನಕಲಿ ಪತ್ರ ಇರುತ್ತದೆ. ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ಪತ್ರ ಸಂಖ್ಯೆ: ಎಚ್ಡಿಎಮ್ಸಿ/30/01/2020-21 ಕಂದಾಯ ಅಧಿಕಾರಿ ಕಚೇರಿ ದಿನಾಂಕ: 16/02/2021, 878 ಪಿಐಡಿಲಿ ಸೈ್ಟಸರುಗಳೊಂದಿಗೆ ಮಾಗಣಿ, ಬಾಕಿ, ವಸೂಲಿ ಇರುವ ಪಟ್ಟಿ, ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ಸಂಖ್ಯೆ ಹುಧಾಮಪಾ/ವಕ11/ಮಾಹ/2019-20 ದಿನಾಂಕ: -/08/2019 ಹೇದ್ದಾರಿ ಪಕ್ಕದಲ್ಲಿರುವ ನೇಕಾರನಗರ ವಸತಿ, ವಾಣಿಜ್ಯ ಹಾಗೂ ಖಾಲಿ ನಿವೇಶನ ಸಂಬಂಧಿಸಿದ ವಿವರ ಪಟ್ಟಿ ಪುಟ ಸಂಖ್ಯೆ: 1 ರಿಂದ 147 ಸಲ್ಲಿಸಲಾಗಿದೆ. ದಿಶಾಂಕ ಆ್ಯಪ್ನಲ್ಲಿ ಪಡೆದಿರುವ ರಿ.ಸ.ನಂ.37 ರ ಮ್ಯಾಪ್ಪ್ರತಿ. ಮೇಲೆ ಕಾಣಿಸಿದ ಎಲ್ಲಾ ಕಾಗದ ಪತ್ರಗಳ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವಂತೆ ಅದೇ ಪ್ರತಿಯ ನಕಲು ಪ್ರತಿಗಳನ್ನು ಇಲ್ಲಿಯೂ ಲಗತ್ತಿಸಿನೀಡಲಾಗಿದೆ. ಕರ್ನಾಟಕ ರಾಜ್ಯಪತ್ರ ಮಂಗಳವಾರ ಜುಲೈ 14, 2009 ನಂ:ಜಿ.ನ.ಅ.ಕೋ/ವಹಿ/ಜನ್ನತ್ನಗರ/17/2004-05 ಜಿಲ್ಲಾಧಿಕಾರಿಗಳ ಕಾರ್ಯಾಲಯ ಧಾರವಾಡ ದಿನಾಂಕ: 06/07/2009 ರ ಪ್ರತಿಯನ್ನು ಲಗತ್ತು ಮಾಡಲಾಗಿದೆ.

ಜಮೀನಿಗೆ (Land) ಪಾವತಿಸಬೇಕಾದ ಪರಿಹಾರ:

ಸರ್ವೇ ನಂ. 37/3ಅ ಯಲ್ಲಿನ 6-00-00 ಎಕರೆ ಅಂದರೆ 2,61,360 ಚದರಅಡಿ (24,281.138 ಚದರ ಮೀಟರ್) ವಿಸ್ತೀರ್ಣದ ಜಮೀನಿಗೆ ಪರಿಹಾರದ ಲೆಕ್ಕಾಚಾರ:

ದಿನಾಂಕ 16-11-2018 ರಿಂದ 01-01-2019 ರವರೆಗಿನ ಸಬ್-ರಿಜಿಸ್ಟಾ, ಮಾರ್ಗದರ್ಶಿ ಮೌಲ್ಯದಂತೆ ವಸತಿ ಪ್ರದೇಶಕ್ಕೆ ಪ್ರತಿ ಚದರ ಮೀಟರ್ಗೆರೂ. 14,200/-, ಇದು ಪ್ರತಿ ಚದರ ಅಡಿಗೆ ರೂ. 1,307.55/- ಆಗುತ್ತದೆ.

ಸರ್ಕಾರಿ ಸುತ್ತೋಲೆ ಮತ್ತು ಹು-ಧಾ.ಮ.ಪಾ. (HDMC) ಉಪ-ನಿಯಮಗಳು ಮತ್ತು ನಿರ್ಣಯಗಳ ಪ್ರಕಾರ, ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವ ಜಮೀನುಗಳ ಆಸ್ತಿ ತೆರಿಗೆಯನ್ನು ಯಾವುದೇ ಕಡಿತವಿಲ್ಲದೆ ಒಟ್ಟು ಮಾರ್ಗದರ್ಶಿ ಮೌಲ್ಯದ ಮೇಲೆ ಹೆಚ್ಚುವರಿ 50% ಲೆಕ್ಕಹಾಕಬೇಕು. ಪ್ರಸ್ತುತ ಪ್ರಕರಣದಲ್ಲಿ ದೂರುದಾರರ

ಜಮೀನಿನ ಮಾರುಕಟ್ಟೆ ಮೌಲ್ಯವು ಸಬ್-ರಿಜಿಸ್ಟಾ, ಮಾರ್ಗದರ್ಶಿ ಮೌಲ್ಯದಂತೆ ರೂ. 34,17,41,268/-ಆಗುತ್ತದೆ. ಸಂಬಂಧಿತ ವರ್ಷಕ್ಕೆ(2018-19) ಹು-ಧಾ ಮ ಪಾ ನಿರ್ಣಯದಂತೆ ಆಸ್ತಿ ತೆರಿಗೆ ಶೇ.0.2156% ಇರುತ್ತದೆ.

ಆದ್ದರಿಂದ 34,17,41,268/- ರ 0.2156% ಭಾಗವು ರೂ 7,36,794.17/- ಆಗುತ್ತದೆ (ಇದು 6-00-00 ಎಕರೆ ಜಮೀನಿಗೆ ಪಾವತಿಸಬೇಕಾದ ತೆರಿಗೆ).

ಆದ್ದರಿಂದ, ಕೊಳಚೆ ಪ್ರದೇಶ ಕಾಯ್ದೆಯ ಕಲಂ 20 ರ ಪ್ರಕಾರ, ರೂ. 7,36,794.17/- ರ 300 ಪಟ್ಟು ಮೊತ್ತವು 22,10,38,252.14/-

ಸ್ವಾಧೀನಪಡಿಸಿಕೊಂಡ ಜಮೀನಿಗೆ ಪಾವತಿಸಬೇಕಾದ ಒಟ್ಟು ಪರಿಹಾರ: ರೂ. 22,10,38,252.14/- (ಇಪ್ಪತ್ತೆರಡು ಕೋಟಿ ಹತ್ತು ಲಕ್ಷ ಮೂವತ್ತೆಂಟು ಸಾವಿರದ ಇನ್ನೂರು ಐವತ್ತೆರಡು ರೂಪಾಯಿ ಹದಿನಾಲ್ಕು ಪೈಸೆ).

ಸಬ್-ರಿಜಿಸ್ಟಾ, ಮೌಲ್ಯಮಾಪನದ ಪ್ರತಿಯನ್ನು ದಾಖಲೆ ಸಂಖ್ಯೆ 1 ರನ್ನಾಗಿ ಮತ್ತು ಹು-ಧಾ.ಮ.ಪಾ. ನಡಾವಳಿ ಮತ್ತು ನಿರ್ಣಯದ ಪ್ರತಿಯನ್ನು ದಾಖಲೆ ಸಂಖ್ಯೆ 2 ಮತ್ತು 3 ರನ್ನಾಗಿ ಇಲ್ಲಿ ಲಗತ್ತಿಸಲಾಗಿದೆ.

ಕಟ್ಟಡ/ರಚನೆಗಳಿಗೆ (Structures) ಪಾವತಿಸಬೇಕಾದ ಪರಿಹಾರ:

ಸ್ವಾಧೀನಪಡಿಸಿಕೊಂಡ ಸರ್ವೆ ನಂ.37/3ಅ ನ 2,61,360 **ಚ.ಅ** (6-00-00 ಎಕರೆ) ವಿಸ್ತೀರ್ಣದಲ್ಲಿ ಸುಮಾರು:

- 90 ಟೈಪ್-1 RCC ಕಟ್ಟಡಗಳು (20 X 30 ಅಳತೆ = 54,000 ಚ.ಅಡಿ)
- 95 ಟೈಪ್-2 RCC ಕಟ್ಟಡಗಳು (20 X 30 ಅಳತೆ = 57,000 ಚ.ಅಡಿ)
- 97 ಟೈಪ್-3 RCC ಕಟ್ಟಡಗಳು (20 X 30 ಅಳತೆ = 58,000 ಚ.ಅಡಿ)
- 125 AC ಶೀಟಕಟ್ಟಡಗಳು(20 X 30 ಅಳತೆ = 75,000 ಚ.ಅಡಿ)
- 28 ಟೈಪ್-6 RCC ಕಟ್ಟಡಗಳು (20 X 30 ಅಳತೆ = 16,800 ಚ.ಅಡಿ)

ಮತ್ತು ಕೆಲವು ವಾಣಿಜ್ಯ ಕಟ್ಟಡಗಳು, ಇತರ ಸಮುದಾಯ ನಿವೇಶನಗಳು/ಕಟ್ಟಡಗಳು ಹಾಗೂ ಸ್ಥಳೀಯ ಪ್ರಾಧಿಕಾರಗಳು ಬಳಸುವ ತೆರೆದ ಜಾಗಗಳಿವೆ.

ಅಕ್ರಮ ರಚನೆಗಳಿಗೆ ನಿರ್ಧರಿಸಲಾದ ತೆರಿಗೆಯ ಕುರಿತು ಹು-ಧಾ.ಮ.ಪಾ. ಸಂವಹನದಂತೆ ಪರಿಹಾರದ ಲೆಕ್ಕಾಚಾರ ಕೆಳಗಿನಂತಿದೆ:

- ಟೈಪ್ 1 RCC ಕಟ್ಟಡ:
- ಟೈಪ್ 2 RCC ಕಟ್ಟಡ:
- ಟೈಪ್ 3 RCC ಕಟ್ಟಡ:
- AC ಶೀಟ್ಕಟ್ಟಡ:
- ಟೈಪ್ 6 RCC ಕಟ್ಟಡ:

ಆದ್ದರಿಂದ, ಸ್ವಾಧೀನಪಡಿಸಿಕೊಂಡ ನಿರ್ಮಾಣಗಳಿಗೆ/ರಚನೆಗಳಿಗೆ ಪಾವತಿಸಬೇಕಾದ ಒಟ್ಟು ಪರಿಹಾರ: ರೂ. 64,15,71,000/- (ಅರವತ್ತ ನಾಲ್ಕು ಕೋಟಿ ಹದಿನೈದು ಲಕ್ಷ ಎಪ್ಪತ್ತೊಂದು ಸಾವಿರ ರೂಪಾಯಿಗಳು).

ವಲಯ (Zone) ಸಂಖ್ಯೆ 10 ಮತ್ತು 11 ರ ತೆರಿಗೆ ಮೌಲ್ಯ ಮಾಪನ ವರದಿಗಳ ಪ್ರತಿಯನ್ನು ದಾಖಲೆ ಸಂಖ್ಯೆ 4 ಮತ್ತು 5 ರನ್ನಾಗಿ ಹಾಜರುಪಡಿಸಲಾಗಿದೆ. ದಿನಾಂಕ: 03-02-2020 ರ ಆರ್‌ಟಿಐ (RTI) ಉತ್ತರ ಮತ್ತು ಗಂಗಾವತಿ ಸ್ಲಂಗೆ ಸಂಬಂಧಿಸಿದ ಹೆರೂರು ಕಿಶನ್ರಾವ್ ಅವರ ದಾಖಲೆಗಳನ್ನು ದಾಖಲೆ ಸಂಖ್ಯೆ 6 ರನ್ನಾಗಿ ಹಾಜರುಪಡಿಸಲಾಗಿದೆ.

ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್ನಿವೇಶನದಲ್ಲಿ ನ್ಯಾಯಯುತ ಪರಿಹಾರ ಮತ್ತು ಪಾರದರ್ಶಕತೆಯ ಹಕ್ಕುಕಾಯ್ದೆ 2013 ರ ಪ್ರಕಾರ ಪರಿಹಾರದ ಲೆಕ್ಕಾಚಾರ:

ಸರ್ವೇ ನಂ. 37/3ಅ ಯಲ್ಲಿನ 6-00-00 ಎಕರೆ ಅಂದರೆ 2,61,360 ಚದರ ಅಡಿ (24,281.138 ಚದರ ಮೀಟರ್) ಜಮೀನಿನ ಸಬ್-ರಿಜಿಸ್ಟ್ರಾ, ಮಾರ್ಗದರ್ಶಿ (16-11-2018 00 01-01-2019) ಪ್ರತಿ ಚ.ಮೀ ರೂ 14,200/- ಅಂದರೆ ಪ್ರತಿ ಚದರ ಅಡಿಗೆ ರೂ 1307.55/- ಆಗುತ್ತದೆ.

ಇದಕ್ಕೆ ಹೆಚ್ಚುವರಿಯಾಗಿ 100% ಸೋಲೇಷಿಯಮ್ (Solatium), ನಗರೀಕರಣ (Urban multiplication), (Severance charge), ಬಡ್ಡಿ ಮತ್ತು ಇತರ ಎಲ್ಲಾ ಶಾಸನಬದ್ಧ ಸೌಲಭ್ಯಗಳು ಹಾಗೂ ಪುನರ್ವಸತಿ ಮತ್ತು ಸಾಮಾಜಿಕ ಪ್ರಭಾವ ಮೌಲ್ಯಮಾಪನ ನಿಬಂಧನೆಗಳು ದೂರುದಾರರಿಗೆ ಅತ್ಯಂತ ಪ್ರಯೋಜನಕಾರಿಯಾಗಲಿವೆ. ಹೊಸ ಕಾಯ್ದೆಯಡಿ ನಿಗದಿಯಾಗುವ ಪರಿಹಾರವು ಕೊಳಚೆ ಪ್ರದೇಶ ಕಾಯ್ದೆಯಡಿ ನಿಗದಿಯಾದ ಪರಿಹಾರಕ್ಕಿಂತ ಬಹುಪಟ್ಟು ಹೆಚ್ಚಾಗಿರುತ್ತದೆ (ಅಂದಾಜು 100 ಕೋಟಿಗೂ ಹೆಚ್ಚಾಗುತ್ತದೆ).

*ಉಪಆಯುಕ್ತರು, ಎಚ್.ಡಿ.ಎಮ್.ಸಿ.ಸಿ. ಧಾರವಾಡರವರು ದಿನಾಂಕ: 16-02-2026 ರ ಆದೇಶದಂತೆ ರೂ 26,70,000/- (ಸೆಸ್ ಹೊರತುಪಡಿಸಿ) ಪರಿಹಾರವನ್ನು ನಿಗದಿಪಡಿಸಿ ಠೇವಣಿ ಮಾಡಿರುವುದು ವೈಜ್ಞಾನಿಕವಲ್ಲದ್ದು ಎಂದು ಸಲ್ಲಿಸಲಾಗುತ್ತಿದೆ ಎಂದು ತಿಳಿಸಲಾಗಿರುತ್ತದೆ.

ಶ್ರೀ ಗಂಗಾಧರ ನಿಂಗಪ್ಪ ವಾಲಿಕಾರ ಉರ್ಫತಳವಾರ (A2) ರವರ ಲಿಖಿತ ಹೇಳಿಕೆಗಳ ಸಾರಂಶ ಮತ್ತು ಕೋರಿಕೆ:

ರಿ.ಸ.ನಂ.37/2ಬಿರಲ್ಲಿ 1ಎ-26 ಗುಂ-08 ಆಣೆ ಭೂಮಾಲೀಕರು/ಹಕ್ಕುದಾರರಾಗಿದ್ದು, ನಮ್ಮ ಭೂಪರಿಹಾರಕ್ಕೆ ಸಂಬಂಧಿಸಿದಂತೆ ನಡೆದಿರುವ ನ್ಯಾಯಾಂಗ ಮತ್ತು ಆಡಳಿತಾತ್ಮಕ ಬೆಳವಣಿಗೆಗಳನ್ನು ತಮ್ಮ ಗಮನಕ್ಕೆ ತಂದು, ಕಾನೂನುಬದ್ಧವಾಗಿ ಸೂಕ್ತಕ್ರಮಕ್ಕೆಗೊಳ್ಳುವಂತೆ ಈ ಪ್ರಾತಿನಿಧ್ಯವನ್ನುಸಲ್ಲಿಸುತ್ತೇವೆ.

ಭೂಪರಿಹಾರದ ಲೆಕ್ಕಾಚಾರ ಮತ್ತು ವಿಳಂಬ: ದಿನಾಂಕ 07/01/2021 ರಂದು ಪತ್ರ ಸಂಖ್ಯೆಕ.ಕೋ.ಅಮ/ಕಂ-1/ಆರ್-3/11/2014-15/174 ಮೂಲಕ ಭೂಪರಿಹಾರದ ಲೆಕ್ಕಾಚಾರ ಸಿದ್ಧಪಡಿಸಲಾಗಿತ್ತು. ಆದರೆ, ನಂತರ ಹಲವು ವರ್ಷಗಳ ಕಾಲ ಯಾವುದೇ ಅಂತಿಮ ಕ್ರಮಕ್ಕೆಗೊಳ್ಳದೆ ವಿಳಂಬ ಮಾಡಲಾಗಿದೆ.

ನಂತರ ದಿನಾಂಕ 16/02/2026 ರಂದು ಸಂಖ್ಯೆ ಡಿಯುಡಿಸಿ/ಕೋ.ಪ್ರ/ವಹಿ/2025-26/1889 ರಲ್ಲಿ ಹಿಂದಿನ ಲೆಕ್ಕಾಚಾರಕ್ಕೆ ವಿರುದ್ಧವಾಗಿ ಹೊಸ ಭೂಪರಿಹಾರದ ಲೆಕ್ಕಾಚಾರ ಸಿದ್ಧಪಡಿಸಲಾಗಿದೆ. ಈ ಬದಲಾವಣೆಯ ಕಾರಣಗಳು ಮತ್ತು ಆಧಾರ ದಾಖಲೆಗಳನ್ನು ಭೂಮಾಲೀಕರಿಗೆ ಸ್ಪಷ್ಟಪಡಿಸಿಲ್ಲ.

ಆದ್ದರಿಂದ, ದಿನಾಂಕ 07/01/2021 ಮತ್ತು 16/02/2026 ರ ಲೆಕ್ಕಾಚಾರಗಳನ್ನು ಮರುಪರಿಶೀಲಿಸಿ, ನ್ಯಾಯಾಲಯದ ಆದೇಶಗಳಿಗೆ ಅನುಗುಣವಾಗಿ ನ್ಯಾಯಯುತ ಪರಿಹಾರವನ್ನು ನಿಗದಿಪಡಿಸಬೇಕು.

ಸ್ಥಳದ ವಾಸ್ತವ ಸ್ಥಿತಿ ಮತ್ತು ಸರ್ಕಾರಿ ದಾಖಲೆಗಳು: ಸದರಿ ಪ್ರದೇಶದಲ್ಲಿ ಸುಮಾರು 118 ಮನೆಗಳು ನಿರ್ಮಾಣಗೊಂಡಿದ್ದು, ಕುಟುಂಬ ಸಮೇತ ಜನರು ವಾಸಿಸುತ್ತಿದ್ದಾರೆ. ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯವರು ಈಗಾಗಲೇ ಸಂಬಂಧಪಟ್ಟ ನಿವಾಸಿಗಳಿಗೆ ಪ್ರಮಾಣಪತ್ರಗಳನ್ನು ನೀಡಿದ್ದಾರೆ. ಅಲ್ಲದೆ, ಮುನಿಸಿಪಲ್ಕೌನಲ್ನಂ. 10 ಮತ್ತು 11ರ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ (Property Tax) ದಾಖಲೆಗಳು, ತೆರಿಗೆ ಪಟ್ಟಿಗಳು ಮತ್ತು ಪಾವತಿ ವಿವರಗಳು ಲಭ್ಯವಿವೆ.

ಈ ಎಲ್ಲಾ ಸರ್ಕಾರಿ ದಾಖಲೆಗಳನ್ನು ಭೂಪರಿಹಾರ ನಿರ್ಧಾರ ಮಾಡುವಾಗ ಪರಿಗಣಿಸಬೇಕು.

ದಿನಾಂಕ 07/01/2021 ಮತ್ತು 16/02/2026 ರ ಭೂಪರಿಹಾರದ ಲೆಕ್ಕಾಚಾರಗಳನ್ನು ಮರುಪರಿಶೀಲಿಸಬೇಕು.

ಲೆಕ್ಕಾಚಾರ ಬದಲಾವಣೆಯ ಕಾರಣಗಳನ್ನು ದಾಖಲೆಗಳೊಂದಿಗೆ ಸ್ಪಷ್ಟಪಡಿಸಬೇಕು.

ವಿಳಂಬಕ್ಕೆ ಕಾರಣವಾದ ಅಂಶಗಳನ್ನು ಪರಿಶೀಲಿಸಬೇಕು.

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ನೀಡಿರುವ ಪತ್ರಗಳು, 118 ಮನೆಗಳ ವಿವರ ಹಾಗೂ ಮುನಿಸಿಪಲ್ಕೌನಲ್ನಂ. 10 ಮತ್ತು 11ರ ಆಸ್ತಿ ತೆರಿಗೆ ದಾಖಲೆಗಳನ್ನು ಪರಿಗಣಿಸಬೇಕು.

ಭೂಮಾಲೀಕರಿಗೆ ಕಾನೂನು ಬದ್ಧವಾಗಿ ದೊರೆಯಬೇಕಾದ ನ್ಯಾಯಯುತ ಭೂಪರಿಹಾರವನ್ನು ಶೀಘ್ರವಾಗಿ ಪಾವತಿಸಬೇಕು.

ಎಲ್ಲಾ ಕಾನೂನು ಬದ್ಧ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿದ ನಂತರವೇ ಅಂತಿಮ ಗಜೆಟ್ಪ್ರಕಟಿಸಬೇಕು.

ಹು-ಧಾ ಮಾಹನಗರ ಪಾಲಿಕೆ ಹೇಳಿಕೆ:

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ (2) ರ ಮಾನ್ಯರ ಕಚೇರಿ ಪತ್ರದಲ್ಲಿ ಹುಬ್ಬಳ್ಳಿ ನಗರದ ಅಯೋಧ್ಯೆ ಗ್ರಾಮ ನೇಕಾರನಗರ ಕೊಳಚೆ ಪ್ರದೇಶ ದರಿ.ಸ.ನಂ:37/3ಎರಲ್ಲಿಕ್ಷೇತ್ರ; 6ಎ-18ಗು-15 ಆಣೆ ಮತ್ತು ರಿ.ಸ.ನಂ-

37/2ಬಿರಲ್ಲಿನ ಕ್ಷೇತ್ರ: 1ಎ-26 ಗುಂಟೆ-08 ಆಣೆ ಕೊಳಚೆ ಪ್ರದೇಶದ ಜಮೀನಿಗೆ ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನೆ) ಕಾಯ್ದೆ 1973 ರಕಲಂ-20 ರಂತೆ ಪರಿಹಾರದ ಅಂದಾಜು ಮೊತ್ತವನ್ನು ನಿಗದಿಪಡಿಸಿ ನೀಡಲು ಸೂಚಿಸಿದ್ದರನ್ವಯ ಹುಬ್ಬಳ್ಳಿ ವಿಭಾಗದ ಅಯೋಧ್ಯ ಗ್ರಾಮ ನೇಕಾರನಗರ ಕೊಳಚೆ ಪ್ರದೇಶ ದರಿ.ಸ.ನಂ:37/3ಎರಕ್ಷೇತ್ರ; 6ಎ-18ಗುಂ-15 ಆಣೆ ಮತ್ತು ರಿ.ಸ.ನಂ-37/2ಬಿರ ಕ್ಷೇತ್ರ; 1ಎ-26ಗುಂ-08 ಆಣೆ ಕೊಳಚೆ ಪ್ರದೇಶದ ಜಮೀನುಗಳಿಗೆ ಖಾಲಿನಿವೇಶನದ ಆಧಾರದಮೇರೆಗೆ ಆಗುವ ತೆರಿಗೆ ಆಯಾ ಪ್ರದೇಶಗಳ ಖಾಲಿ ನಿವೇಶನದ ಆಧಾರದ ಮೇರೆಗೆಸನ್-2020-21 ಸಾಲಿಗೆ ಲೆಕ್ಕಾಚಾರ ಮಾಡಿ ಆಸ್ತಿ ತೆರಿಗೆ ವಿವರದ ವರದಿಯನ್ನು ಸಲ್ಲಿಸಲಾಗಿರುತ್ತದೆ.

ಪ್ರಸ್ತಾಪಿತ ಕೊಳಚೆ ಪ್ರದೇಶ ದರಿ. ಸ.ನಂ.37/3ಎರ ಕ್ಷೇತ್ರ; 6ಎ-18ಗುಂ-15 ಆಣೆ ಮತ್ತು ರಿ.ಸ.ನಂ-37/2ಬಿರ ಕ್ಷೇತ್ರ; 1ಎ-26ಗುಂ-08 ಆಣೆ ಜಮೀನನ್ನು ಸರ್ಕಾರದಿಂದ 2018 ನೇ ಸಾಲಿನಲ್ಲಿ ಮಂಡಳಿ ಕಾಯ್ದೆ ಕಲಂ-17 ರಡಿ ಆದರೆ ಆಸ್ತಿ ತೆರಿಗೆ ವಿವರಗಳನ್ನು 2020-21 ನೇ ಸಾಲಿಗೆ ನಿರ್ಧರಣೆ ಮಾಡಲಾಗಿದೆ. ಭೂಸ್ವಾಧೀಪಡಿಸಿಕೊಂಡಿರುವ ಕೊಳಚೆ ಪ್ರದೇಶದ ಜಮೀನು ಭೂಪರಿವರ್ತನೆಯಾಗಿರುವುದು ಕಂಡು ಬಂದಿರುವುದಿಲ್ಲ. ಆದ್ದರಿಂದ ಭೂಪರಿಹಾರ ಮೊತ್ತವನ್ನು ಮರು ಪರಿಶೀಲಿಸಲು ತಿಳಿಸಿಲಾಗಿದೆ.

ಪ್ರಸ್ತಾಪಿತ ಅಯೋಧ್ಯ ಗ್ರಾಮ ನೇಕಾರನಗರ ಕೊಳಚೆ ಪ್ರದೇಶ ದರಿ.ಸ.ನಂ:37/3ಎರಲ್ಲಿ ಕ್ಷೇತ್ರ; 6ಎ-18ಗುಂ-15 ಆಣೆ ಜಾಗೆಯು ವಲಯ ಕಚೇರಿ-10 ರ ವ್ಯಾಪ್ತಿಗೆ ಬರುತ್ತಿದ್ದು, ನಿಗಧಿಪಡಿಸಲಾದ ಸನ್-2018-19 ನೇ ಸಾಲಿನ ಆಸ್ತಿ ತೆರಿಗೆ ಮೊತ್ತ ರೂ- 7241/- (ಸೆಸ್ಸುಗಳನ್ನೊಳಗೊಂಡಂತೆ) ಆಗುವ ಮೊತ್ತ ರೂ-21,72,300/-ಹಾಗೂ ಆಸ್ತಿತೆರಿಗೆ ಮೊತ್ತ ರೂ-5747/- (ಸೆಸ್ಸುಗಳನ್ನು ಹೊರತುಪಡಿಸಿ) ಮೊತ್ತ ರೂ-17,24,100/- ಹಾಗೂ ವಲಯ ಕಚೇರಿ-11 ರ ವ್ಯಾಪ್ತಿಗೆ ಒಳಪಡುವ ರಿ.ಸ.ನಂ-37/2ಬಿರಲ್ಲಿನ ಕ್ಷೇತ್ರ: 1ಎ-26ಗುಂ-08 ಆಣೆ ಕೊಳಚೆ ಪ್ರದೇಶದ ಸನ್-2018-19 ನೇ ಸಾಲಿನ ಆಸ್ತಿ ತೆರಿಗೆ ಮೊತ್ತ ರೂ- 3973/-(ಸೆಸ್ಸುಗಳನ್ನೊಳಗೊಂಡಂತೆ) ಮೊತ್ತ ರೂ-11,91,900/- ಹಾಗೂ ಆಸ್ತಿ ತೆರಿಗೆ ಮೊತ್ತರೂ- 3153/-(ಸೆಸ್ಸುಗಳನ್ನು ಹೊರತುಪಡಿಸಿ) ಮೊತ್ತ ರೂ-9,45,900/- ಆಗುತ್ತದೆ. ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನೆ) ಕಾಯ್ದೆ 1973 ರಕಲಂ-20 ರನ್ವಯ ಸದರ ಮೊತ್ತದ ಒಟ್ಟಾರೆಯಾಗಿ 300 ಪಟ್ಟು ರೂ-33,64,200/-(ಸೆಸ್ಸುಗಳನ್ನೊಳಗೊಂಡಂತೆ) ಹಾಗೂ ಸದರ ಮೊತ್ತದ 300 ಪಟ್ಟು ರೂ-26,70,.000/- (ಸೆಸ್ಸುಗಳನ್ನು ಹೊರತುಪಡಿಸಿ) ಆಗುತ್ತದೆ

ಮೇಲೆ ವಿವರಿಸಿದ ಅಂಶಗಳನ್ವಯ ಅಯೋದ್ಯಾ ಗ್ರಾಮ ನೇಕಾರನಗರ ರಿ.ಸ.ನಂ.37/3ಎ ಕ್ಷೇತ್ರ:6 ಎ-18 ಗುಂ-15 ಆಣೆ ಹಾಗೂ 37/2ಬಿ ಕ್ಷೇತ್ರ 1ಎ-26 ಗುಂ-8 ಆಣೆ ಕ್ಷೇತ್ರಗಳಿಗೆ ಕರ್ನಾಟಕ ಮಹಾನಗರ ಪಾಲಿಕೆಗಳ ಕಾಯ್ದೆ 1976ರಕಲಂ 108 ಹಾಗೂ 109-ಎನೇದ್ದರನ್ವಯ ಆಯಾ ಪ್ರದೇಶಕ್ಕೆ ಅನುಗುಣವಾಗಿ ಉಪನೋಂದಣಾಧಿಕಾರಿಗಳಿಂದ ಸ್ವೀಕೃತವಾದ ಮಾರುಕಟ್ಟೆ ಮಾರ್ಗಸೂಚಿ ಬೆಲೆಗಳನ್ವಯ ಸನ್ 2018-19 ಸಾಲಿಗೆ ಚಾಲನೆಯಲ್ಲಿ ಇರುವ ಆಸ್ತಿ ತೆರಿಗೆ ದರಗಳ ಆಧಾರದ ಮೇರೆಗೆ ವಿಧಿಸಲಾದ ಆಸ್ತಿ ತೆರಿಗೆ ದರವು ಸರಿ ಇರುತ್ತದೆ ಎಂದು ಹೇಳಿಕೆ ನೀಡಿರುತ್ತಾರೆ.

ವಿಚಾರಣೆಯಿಂದ, ಪಡೆಯಲಾದ ಹೇಳಿಕೆಗಳು ಮತ್ತುದಾಖಲೆಗಳಿಂದ, ಆದೇಶಗಳು/ಸುತ್ತೋಲೆಗಳು ಹಾಗೂ ಕರ್ನಾಟಕ ಕೊಳಚೆ ಪ್ರದೇಶಗಳ (ಸುಧಾರಣೆ ಮತ್ತುನಿರ್ಮೂಲನೆ) ಕಾಯ್ದೆ 1973 ರ ಕಲಂ 20 ರಡಿನಿರ್ಣಯ :

1. ದಿನಾಂಕ: 12.07.1990 ರಂದು ಮಾನ್ಯ ವಿಭಾಗಾಧಿಕಾರಿಗಳು ಬೆಳಗಾವಿ ಇವರು ಹು-ಧಾ ಮಹಾನಗರ ಪಾಲಿಕೆ ವ್ಯಾಪ್ತಿಯ ಹುಬ್ಬಳ್ಳಿನಗರದ ಅಯೋಧ್ಯಾ ಗ್ರಾಮದ ನೇಕಾರನಗರ ಪ್ರದೇಶವನ್ನು ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನೆ) ಕಲಂ 3 ರ ಪ್ರಕಾರ ಕೊಳಚೆ ಪ್ರದೇಶವೆಂದು ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಿ, ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ.

2. ದಿನಾಂಕ: 20.05.1992 ರಂದು ಮಾನ್ಯ ವಿಭಾಗಾಧಿಕಾರಿಗಳು ಬೆಳಗಾವಿ ಇವರು ಹುಬ್ಬಳ್ಳಿ ನಗರದ ಅಯೋಧ್ಯಾ ಗ್ರಾಮದನೇಕಾರನಗರ ಪ್ರದೇಶವನ್ನು ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನೆ) ಕಲಂ 3 ರ ಪ್ರಕಾರ ಕೊಳಚೆ ಪ್ರದೇಶವೆಂದು ಅಂತಿಮವಾಗಿ ಘೋಷಿಸಲಾಗಿದೆ

3. ದಿನಾಂಕ: 16.11.2018 ರಂದು ಮಾನ್ಯ ಸರ್ಕಾರದ ಅಧೀನ ಕಾರ್ಯದರ್ಶಿ, ವಸತಿ ಇಲಾಖೆ ಇವರ ಅಧಿಸೂಚನೆ ಸಂಖ್ಯೆವಇ134 ಕೊಮಂಇ 2018 ದಿನಾಂಕ: 16.11.2018 ರ ಪ್ರಕಾರ ಸದರಿ ಪ್ರದೇಶವನ್ನು ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನೆ) ಅಧಿನಿಯಮ 1973 ರಕಲಂ 17 ರಂತೆ ಭೂ-ಸ್ವಾದೀನಪಡಿಸಿಕೊಳ್ಳುವುದು ಅವಶ್ಯಕವಾಗಿದೆ ಎಂದು ಸರ್ಕಾರವು ಮನಗಂಡು, ರಿ.ಸ.ನಂ.37/3ಎ ಕ್ಷೇತ್ರ 06 ಎ-32 ಗು-04 ಆಣಿ ಹಾಗೂ ಕ್ಷೇತ್ರ 37/2ಬಿ 01ಎ-26 ಗುಂ-08 ಆಣಿ ಜಮೀನನ್ನು ಕಲಂ 17ರಡಿ ಭೂಸ್ವಾಧೀನಕ್ಕಾಗಿ ಅಧಿಸೂಚನೆಯನ್ನು ಹೊರಡಿಸಲಾಗಿದೆ.

4. ದಿನಾಂಕ:11-04-2022ರ ಸರ್ಕಾರದ ನಡುವಳಿಯಲ್ಲಿ ಮಾನ್ಯ ಜಿಲ್ಲಾಧಿಕಾರಿಯವರ ಪತ್ರ ದಿನಾಂಕ:25-03-2022ರ ವರದಿಯಂತೆ ಅಧಿನಿಯಮ 1973 ರಕಲಂ 17 ರಂತೆ ಭೂ-ಸ್ವಾದೀನ ಪ್ರಕ್ರಿಯೆಯ ಪ್ರಾಥಮಿಕ ಅಧಿಸೂಚನೆಯನ್ನು ಹಿಂಪಡೆಯಲಾಗಿದೆ.

5. ದಿನಾಂಕ:27-09-2024 ರ ಮಾನ್ಯ ಉಚ್ಚನ್ಯಾಯಾಲಯದ WP No.101473-2023 C/W 104671-2023 ರನ್ವಯ ಭೂಮಾಲೀಕರಿಗೆ ಭೂಪರಿಹಾರ ನೀಡುವಂತೆ ಆದೇಶಿಸಲಾಗಿದೆ.

6. ದಿನಾಂಕ:21-07-2025ರಂದು WP No.101473-2023ರ ಆದೇಶದ ವಿರುದ್ಧ ಮಂಡಳಿಯಿಂದ ಸಲ್ಲಿಸಿದ WA No.100107-2025ನ್ನು ಮಾನ್ಯ ನ್ಯಾಯಾಲಯವು ತಿರಸ್ಕರಿಸಿದೆ.

7. ದಿನಾಂಕ:02-02-2026ರಂದು ಆಯುಕ್ತರು, ಕಕೊಅಮಂ, ಬೆಂಗಳೂರುಇವರು CCC No. 100393- 2025 Linked Case CCC No.100468-2025 ಕೊಳಚೆ ಪ್ರದೇಶಗಳ (ಸುಧಾರಣೆ ಮತ್ತು ನಿರ್ಮೂಲನೆ 1973 ರ ಕಲಂ 20 ರಂತೆ ಸನ್ 2018-19 ಸಾಲಿಗೆ ಚಾಲನೆಯಲ್ಲಿ ಇರುವ ಆಸ್ತಿ ತೆರಿಗೆ ದರಗಳ ಆಧಾರದ ಮೇಲೆ ಭೂಪ ರಿಹಾರ ಮೊತ್ತವನ್ನು ಪರಿಷ್ಕರಿಸಿ ನಿಗಧಿಪಡಿಸಿ ನೀಡುವಂತೆ ಕೋರಲಾಗಿದೆ.

8. ದಿನಾಂಕ:16-02-2026ರ ಪತ್ರದಲ್ಲಿ ಆಯುಕ್ತರು, ಹುಧಾ ಮಪಾಲಿಕೆ ಇವರು ಸನ್ 2018-19ನೇ ಸಾಲಿನ ಆಸ್ತಿ ತೆರಿಗೆ ಆಧಾರದ ಮೇಲೆ ಕರ್ನಾಟಕಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನೆ) ಅಧಿನಿಯಮ 1973 ರ ಕಲಂ 20ರನ್ವಯ ಭೂಪರಿಹಾರ ಮೊತ್ತವನ್ನು ನಿಗಧಿಪಡಿಸಿ ಜಿಲ್ಲಾಧಿಕಾರಿಗಳಿಗೆ ವರದಿ ನೀಡಿದ ಆಧಾರದ ಮೇಲೆ, ಜಿಲ್ಲಾಧಿಕಾರಿಗಳು ಪರಿಹಾರದ ಮೊತ್ತವನ್ನು ನಿಗಧಿಪಡಿಸಿ ಮಾನ್ಯ ಆಯುಕ್ತರು, ಕಕೊಅಮಂ, ಬೆಂಗಳೂರು ಇವರಿಗೆ ಪತ್ರ ಬರೆಯಲಾಗಿದೆ.

9. ದಿನಾಂಕ:20-02-2026ರ ಕೇಂದ್ರ ಕಛೇರಿಯ ಪತ್ರದನ್ವಯ ಮಂಡಳಿಯ ವಕೀಲರಾದ ಶ್ರೀ ಸುನೀಲ್ದೇಸಾಯಿ ಇವರ ಮುಖಾಂತರ ಕಲಂ 20ರನ್ವಯ ಮಾನ್ಯ ಜಿಲ್ಲಾಧಿಕಾರಿಗಳು ನಿಗಧಿಪಡಿಸಿದ ರೂ.26,70,000/- ಪರಿಹಾರ ಮೊತ್ತವನ್ನು Additional Registrar General, High Court of Karnataka ಇವರ ಹೆಸರಿನಲ್ಲಿ ಡಿ.ಡಿ. ಮೂಲಕ ಮಾನ್ಯ ಉಚ್ಚನ್ಯಾಯಾಲಯದಲ್ಲಿ ಠೇವಣಿ ಮಾಡಲು ಸೂಚಿಸಿರುತ್ತಾರೆ. ಅದರಂತೆ ಪರಿಹಾರ ಮೊತ್ತವನ್ನು ಮಾನ್ಯ ಉಚ್ಚನ್ಯಾಯಾಲಯದಲ್ಲಿ ಠೇವಣಿ ಮಾಡಲಾಗಿದೆ.

10. ದಿನಾಂಕ:31-07-2026ರಂದು ಮಾನ್ಯ ಆಯುಕ್ತರು, ಕಕೊಅಮ, ಬೆಂಗಳೂರು ಇವರು ಸರ್ಕಾರದ ಅಧಿಸೂಚನೆ ಸಂಖ್ಯೆಹೆಚಯುಡಿ 53 ಎಂಪಿಎಸ್ 79 ದಿನಾಂಕ:16-04-1979ನ್ನು ಉಲ್ಲೇಖಿಸಿ ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನೆ) ಅಧಿನಿಯಮ 1973 ರಕಲಂ 20 (2)ರನ್ವಯ ಅಧಿಸೂಚನೆಯನ್ನು ಪ್ರಕಟಿಸುವಂತೆ ಜಿಲ್ಲಾಧಿಕಾರಿಗಳಿಗೆ ಕೋರಲಾಗಿದೆ.

11. ಕೊಳಚೆ ಪ್ರದೇಶವೆಂದು ಘೋಷಿಸಲಾದ ರಿ.ಸ.ನಂ 37/3ಅ ಕ್ಷೇತ್ರ 6ಎ-32ಗು 4 ಆಣೆ ನೇದ್ದರ ಪೈಕಿ ಭೂಮಾಲೀಕರ ಸ್ವಂತ ವಹಿವಾಟಿನಲ್ಲಿರುವ 14ಗು ಮತ್ತು ರಣದಮ್ಮ ಗ್ರಾಮದೇವಿ ದೇವಸ್ಥಾನವಾಗಿ ಬಳಸಲಾಗುತ್ತಿರುವಭೂಮಾಲೀಕರಸ್ವಂತವಹಿವಾಟಿನಲ್ಲಿರುವ 06ಗು-04 ಆಣೆಹಾಗೂ ರಾಷ್ಟ್ರೀಯ ಹೆದ್ದಾರಿ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡು ಈಗಾಗಲೇ ಭೂಮಾಲೀಕರಿಗೆ ಪರಿಹಾರ ಪಾವತಿಸಿದ 12ಗು ಜಮೀನುಗಳನ್ನು ಹೊರತುಪಡಿಸಿ 6 ಎಕರೆ 00 ಗುಂಟೆ 00 ಆಣೆ ಪ್ರದೇಶಕ್ಕೆ ಪರಿಹಾರವನ್ನು ನಿರ್ಧರಿಸಲು ಮತ್ತು ಪಾವತಿಸಲು ವಿನಂತಿಸಿರುವುದನ್ನು ಪರಿಗಣಿಸಲಾಯಿತು.

12. ರಿ.ಸ.ನಂ-37/2ಬಿರಲ್ಲಿನ ಕ್ಷೇತ್ರ: 1ಎ-26 ಗುಂ-08 ಆಣೆ ಕ್ಷೇತ್ರ ಪ್ರದೇಶಕ್ಕೆ ಪರಿಹಾರವನ್ನು ನಿರ್ಧರಿಸಲು ಮತ್ತು ಪಾವತಿಸಲು ವಿನಂತಿಸಿರುವುದನ್ನು ಪರಿಗಣಿಸಲಾಯಿತು.

13. ಕರ್ನಾಟಕ ಕೊಳಚೆ ಪ್ರದೇಶಗಳ (ಸುಧಾರಣೆ ಮತ್ತು ನಿರ್ಮೂಲನೆ) ಕಾಯ್ದೆ 1973 ರ ಕಲಂ 03 ರ ಪ್ರಕಾರ ಕೊಳಚೆ ಪ್ರದೇಶವೆಂದು ಘೋಷಿಸಲ್ಪಟ್ಟು, ಇದೇ ಕಾಯ್ದೆಯ ಕಲಂ 17 ರಂತೆ ಸ್ವಾಧೀನಪಡಿಸಿಕೊಂಡ ಪ್ರದೇಶಕ್ಕೆ ಕಲಂ20(1) ರಂತೆ ಮಾತ್ರ ಭೂಪರಿಹಾರ ಮೊತ್ತ ನಿಗದಿಪಡಿಸಲು ಅವಕಾಶವಿರುವುದರಿಂದ, ಭೂಮಾಲೀಕರು ಕೋರಿದಂತೆ ಭೂಸ್ವಾಧೀನ, ಪುನರ್ವಸತಿ ಮತ್ತು ಪುನರನಿವೇಶನ ನ್ಯಾಯಯುತ ಪರಿಹಾರ ಮತ್ತು ಪಾರದರ್ಶಕತೆಯ ಹಕ್ಕು ಕಾಯ್ದೆ 2013 ರ ಪ್ರಕಾರ ಪರಿಹಾರದ ಲೆಕ್ಕಾಚಾರ ಮಾಡುವುದನ್ನು ಪರಿಗಣಿಸಲುಆಗುವುದಿಲ್ಲ.

14. ಕರ್ನಾಟಕ ಕೊಳಚೆ ಪ್ರದೇಶಗಳ (ಸುಧಾರಣೆ ಮತ್ತು ನಿರ್ಮೂಲನೆ) ಕಾಯ್ದೆ 1973 ರ ಕಲಂ3 ***'1. ಸರ್ಕಾರಕ್ಕೆ... (ಎ) ಪ್ರದೇಶವು ತಗ್ಗಿನಲ್ಲಿರುವುದು, ಅನೈರ್ಮಲ್ಯಕರ, ಹೊಲಸು, ಮಿತಿಮೀರಿದ ಸಂದಣಿ ಇವುಗಳಿಂದಾಗಿ ಅಥವಾ ಅನ್ಯಥಾ ಆ ಪ್ರದೇಶ ಅಥವಾ ಅದರ ನೆರೆಹೊರೆಯ ಸಾರ್ವಜನಿಕ ಆರೋಗ್ಯ ಸುರಕ್ಷೆ ಅಥವಾ ಅನುಕೂಲಕ್ಕೆ ಯಾವುದೇ ಪ್ರದೇಶವು ಅಪಾಯದ ಮೂಲವಾಗಿದೆ ಅಥವಾ ಮೂಲವಾಗುವ ಸಂಭವವಿದೆಯೆಂದು ; ಅಥವಾ***

ಬಿ) ಮನುಷ್ಯವಾಸಕ್ಕೆ ಉಪಯೋಗಿಸುವ ಅಥವಾ ಉಪಯೋಗಿಸಲು ಉದ್ದೇಶಿಸಿದ ಯಾವುದೇ ಪ್ರದೇಶದಲ್ಲಿ ಕಟ್ಟಡಗಳು
ಯಾವುದೇ ಬಗೆಯಲ್ಲಿ ಮನುಷ್ಯ ವಾಸಕ್ಕೆ ಯೋಗ್ಯವಾಗಿಲ್ಲವೆಂದು; ಅಥವಾ
ಅಂಥ ಕಟ್ಟಡಗಳ ಜೀರ್ಣಾವಸ್ಥೆ, ಜನನಿಬಿಡತೆ, ದೋಷಪೂರ್ಣ ವ್ಯವಸ್ಥೆ ಮತ್ತು ವಿನ್ಯಾಸ, ಬೀದಿಗಳು ಇಕ್ಕಟ್ಟಾಗಿರುವುದು: ಮತ್ತು ಅವುಗಳ ದೋಷಪೂರ್ಣ ವ್ಯವಸ್ಥೆ, ವಾಯುಸಂಚಾರ, ದೀಪ ಅಥವಾ ನೈರ್ಮಲ್ಯ ಸೌಲಭ್ಯಗಳ ಅಭಾವ ಅಥವಾ ಈ ಸಂಬಂಧಗಳ ಯಾವುದೇ ಕೂಟದಿಂದಾಗಿ ಸುರಕ್ಷೆ, ಆರೋಗ್ಯ ಮತ್ತು ನೀತಿಗೆ ಹಾನಿಕರವೆಂದು ಮನದಟ್ಟಾದಲ್ಲಿ, ಅದು ಅಧಿಸೂಚನೆಯ ಮೂಲಕ ಅಂಥ ಪ್ರದೇಶವನ್ನು ಕೊಳಚೆ ಪ್ರದೇಶವೆಂದು ಘೋಷಿಸಬಹುದು.'ಎಂದು ಇರುತ್ತದೆ.

ಅದರಂತೆ ಸದರಿ ಪ್ರದೇಶವನ್ನು ಕ,ಸಂ ಎಂಯುಎನ/ಬಿಜಿಎಂ/ಸಿ ಆರ-152/89-90 ದಿನಾಂಕ:20-05-1992 ರಂತೆ ವಿಭಾಗಾಧಿಕಾರಿಗಳು ಧಾರವಾಡ ಇವರು ಅಧಿಸೂಚನೆ ಹೊರಡಿಸಿ ಅಂತಿಮವಾಗಿ ಕೊಳಚೆಪ್ರದೇಶವೆಂದು ಘೋಷಿಸಿರುತ್ತಾರೆ. ಅಂತಹ ಅಂತಿಮ ಅಧಿಸೂಚನೆ ಹೊರಡಿಸುವ ಮುನ್ನ ಸಂಬಂಧಿಸಿದ ಭೂ-ಮಾಲೀಕರಿಗೆ ದಿನಾಂಕ:17-03-1992 ರಂದು ಹೊರಡಿಸಲಾದ ಪ್ರಾರಂಭಿಕ ಅಧಿಸೂಚನೆಯ ನಕಲುಗಳನ್ನು ಸಂಬಂಧಿಸಿದ ಭೂಮಾಲೀಕರಿಗೆ ಜಾರಿ ಮಾಡಿ ಸ್ವೀಕೃತಿಪಡೆಯಲಾಗಿದ್ದು, ಇದಕ್ಕೆ ಯಾವುದೇ ಆಕ್ಷೇಪಣೆಗಳು ಬಂದಿರುವುದಿಲ್ಲ ಎಂದು ತಿಳಿಸಲಾಗಿರುತ್ತದೆ. ಆದ್ದರಿಂದ ಸದರಿ ಪ್ರದೇಶವನ್ನು ಕೊಳಚೆಪ್ರದೇಶವೆಂದು ಘೋಷಿಸುವ ಪೂರ್ವದಲ್ಲಿ ಅಲ್ಲಿ ಜನರ ವಾಸ ಇರುವುದು ಖಚಿತವಾಗುತ್ತದೆ. ಅಲ್ಲದೆ ಜಮೀನಿನ ಮಾಲಿಕರು ತಮ್ಮ ಭೂಮಿಯನ್ನು ಸಂರಕ್ಷಣೆ ಮಾಡಿಕೊಳ್ಳುವಲ್ಲಿ ವಿಫಲರಾಗಿರುವುದು ಹಾಗೂ ಅಲ್ಲಿ ಭೂಮಾಲೀಕರಿಗೆ ಸೇರಿದ ಯಾವುದೇ ಕಟ್ಟಡಗಳು ಅಥವಾ ರಚನೆಗಳು ಇಲ್ಲವೆಂಬುದು ಕಂಡು ಬರುತ್ತದೆ. ಅಲ್ಲದೆ ವಿಚಾರಣೆಯಲ್ಲಿ ಭೂಮಾಲೀಕರಿಗೆ ತಮ್ಮ ಸ್ವಂತ ವಹಿವಾಟಿನಲ್ಲಿರುವ ಜಮೀನು ಹಾಗೂ ಕಟ್ಟಡಗಳನ್ನು ಹೊರತುಪಡಿಸಿದ ಜಮೀನಿಗೆ ಮಾತ್ರ ಪರಿಹಾರ ನಿರ್ಧರಿಸಿ ಪಾವತಿಸಲು ಕೋರಿರುತ್ತಾರೆ.

15. ಸದರಿ ಕೊಳಚೆ ಪ್ರದೇಶದಲ್ಲಿ ಇರುವ ಕಟ್ಟಡಗಳು ಹಾಗೂ ಇತರೆ ಯಾವುದೇ ರೀತಿಯ ರಚನೆಗಳು ಜಮೀನಿನ ಮಾಲೀಕರಿಗೆ ಸೇರಿದ್ದವುಗಳು ಆಗಿರುವುದಿಲ್ಲ. ಅವು ಅಲ್ಲಿ ವಾಸಿಸುವ ಸ್ಲಂನಿವಾಸಿಗಳು, ಈಗಾಗಲೇ ಸರ್ಕಾರ, ಸ್ಥಳೀಯ ಸಂಸ್ಥೆ ಹಾಗೂ ಮಂಡಳಿಯಿಂದ ನಿರ್ಮಿಸಲಾದ ಮನೆ, ಕಟ್ಟಡ ಹಾಗೂ ಇತರೆ ಮೂಲಭೂತ ಸೌಲಭ್ಯಗಳಾಗಿರುತ್ತವೆ.

16. ಕರ್ನಾಟಕ ಕೊಳಚೆ ಪ್ರದೇಶಗಳ (ಸುಧಾರಣೆ ಮತ್ತು ನಿರ್ಮೂಲನೆ) ಕಾಯ್ದೆ 1973 ರ ಕಲಂ 20 (3) ರಲ್ಲಿ ***'ಭೂಮಿಯ ಒಡೆಯ ಮತ್ತು ಅಂಥ ಭೂಮಿಯ ಮೇಲಿನ ಕಟ್ಟಡದ ಒಡೆಯ ಬೇರೆಬೇರೆಯಾಗಿದ್ದಲ್ಲಿ, ನಿಯಮಿಸಿದ ಪ್ರಾಧಿಕಾರವು ಭೂಮಿಯ ಒಡೆಯ ಮತ್ತು ಕಟ್ಟಡದ ಒಡೆಯರ ನಡುವೆ ಮೊಬಲಗನ್ನು (ಆರ್ಜನೆಯ ದಿನಾಂಕದಂದು ಕಟ್ಟಡದ ಮೌಲ್ಯಕ್ಕೆ ಭೂಮಿಯ ಮೌಲ್ಯವು ಹೊಂದಿರುವಂಥದೇ ಪ್ರಮಾಣದಲ್ಲಿ) ಹಂಚತಕ್ಕುದು.'*** ಎಂದು ಹೇಳಿರುತ್ತದೆ.ಇಲ್ಲಿ ಸದರಿ ಸ್ವಾಧಿನಪಡಿಸಿಕೊಂಡ ಜಮೀನಿನಲ್ಲಿ ಅನಧೀಕೃತವಾಗಿ ವಾಸಿಸುತ್ತಿರುವ ಸ್ಲಂನಿವಾಸಿಗಳಿಗೆ ಅಧೀಕೃತವಾಗಿ ಸ್ವಾಧಿನಪತ್ರ ನೀಡಿ ಭದ್ರತೆ ಒದಗಿಸುವ ಅಲ್ಲದೆ, ವಾಸಿಸುತ್ತಿರುವ ಸಾರ್ವಜನಿಕರಿಗೆ ವಾಸ ಯೋಗ್ಯ ಮನೆಗಳನಿರ್ಮಾಣ, ರಸ್ತೆ ಚರಂಡಿ, ಬೀದಿದೀಪ, ಕುಡಿಯುವ ನೀರು ಹಾಗೂ ಇತರೆ ಮೂಲಭೂತಸೌಕರ್ಯಗಳನ್ನು ಒದಗಿಸಿ ಅಲ್ಲಿನ ನಿವಾಸಿಗಳಿಗೆ ಗೌರವಯುತ ಮತ್ತು ಆರೋಗ್ಯಯುತ ಜೀವನವನ್ನು ನಡೆಸಿಕೊಂಡು ಹೋಗಲು ಮಂಡಳಿಯು ಕಾರ್ಯನಿರ್ವಹಿಸುತ್ತಿರುವುದರಿಂದ, ಸ್ಲಂ ನಿವಾಸಿಗಳ ಒಕ್ಕಲೆಬ್ಬಿಸುವ ಅಥವಾ ಅಲ್ಲಿನ ಯಾವುದೇ ಕಟ್ಟಡ ಅಥವಾ ರಚನೆಗಳನ್ನು ತೆಗೆದುಹಾಕುವ ಉದ್ದೇಶ ಮಂಡಳಿಗೆ ಇಲ್ಲದೇ ಇರುವುದರಿಂದ, ಸದರಿ ಸ್ವಾಧೀನಪಡಿಸಿಕೊಂಡ ಜಮೀನಿನಲ್ಲಿ ಇರುವ ಕಟ್ಟಡಗಳು ಹಾಗೂ ಇತರೆ ರಚನೆಗಳಿಗೆ ಯಾವುದೇ ರೀತಿಯ ಪರಿಹಾರ ನಿರ್ದರಿಸುವ ಹಾಗೂ ಪಾವತಿಸುವ ಪ್ರಮೇಯ ಉದ್ಭವಿಸುವುದಿಲ್ಲ. ಈ ಹಿನ್ನಲೆಯಲ್ಲಿ, ಭೂಮಾಲಿಕರಿಗೆ ಸೇರಿದ ಯಾವುದೇ ಕಟ್ಟಡಗಳು ಹಾಗೂ ಇತರೆ ರಚನೆಗಳು ಸ್ವಾಧೀನವಾದ ಜಮೀನಿನಲ್ಲಿ ಸೇರಿರದೆ ಇರುವುದರಿಂದ ಕೇವಲ ಖಾಲಿ ಜಮೀನಿಗೆ ಭೂಪರಿಹಾರ ನಿರ್ಧರಿಸಲು ನಿರ್ಣಯಿಸಲಾಯಿತು.

17. ಕರ್ನಾಟಕ ಕೊಳಚೆ ಪ್ರದೇಶಗಳ (ಸುಧಾರಣೆ ಮತ್ತು ನಿರ್ಮೂಲನೆ) ಕಾಯ್ದೆ 1973 ರ ಕಲಂ 20 (1) ರಲ್ಲಿ '***ಸಂದಾಯ ಮಾಡಬೇಕಾದ ಮೊಬಲಗು :—(1) ಈ ಅಧ್ಯಾಯವಾದ ಮೇರೆಗೆ ಅರ್ಜಿಸಿದ ಯಾವುದೇ ಭೂಮಿಯ ಸಂಬಂಧದಲ್ಲಿ ಸಂದಾಯವಾಗಬೇಕಾದ ಮೊಬಲಗು ಅಂಥ ಪ್ರದೇಶಕ್ಕೆ ಅನ್ವಯವಾಗುವ ಪೌರಸಭಾ ಕಾನೂನಿನ ಮೇರೆಗೆ 17ನೇ ಪ್ರಕರಣದಲ್ಲಿ ಉಲ್ಲೇಖಿಸಿರುವ ನೋಟೀಸಿನ ಪ್ರಕಟಣಾ ದಿನಾಂಕದಂದು ಅಂಥ ಭೂಮಿಗೆ ಸಂಬಂಧಿಸಿದಂತೆ ಸಂದಾಯವಾಗ ಬೇಕಾದ ಸ್ವತ್ತು ತೆರಿಗೆಯ***

ಮುನ್ನೂರು ಪಟ್ಟು, ಇರತಕ್ಕದ್ದು ಮತ್ತು ಅಂಥ ಭೂಮಿಯ ಸಂಬಂಧದಲ್ಲಿ ಅಂಥ ಯಾವುದೇ ಸ್ವತ್ತು ತೆರಿಗೆಯನ್ನು ಸಂದಾಯ ಮಾಡಬೇಕಾಗದ ಸಂದರ್ಭದಲ್ಲಿ, ಅದಕ್ಕೆ ಹೊಂದಿಕೊಂಡಿರುವ ಅಂತಹದೇ ಭೂಮಿಯ ಬಗ್ಗೆ ಸಂದಾಯ ಮಾಡಬೇಕಾದ ಸ್ವತ್ತು ತೆರಿಗೆಯಾಗಿರತಕ್ಕದ್ದು.'ಎಂದು ಹೇಳಿರುತ್ತದೆ. ಅದರಂತೆ ಆಯುಕ್ತರು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿರವರು ಪತ್ರ ಸಂಖ್ಯೆಕಕೊಅಮ/ಕಂ-2/11/2014-15 ದಿ: 02-02-2026 ಪತ್ರದಲ್ಲಿ ಸದರಿ ಜಮೀನನ್ನು 2018 ನೇ ಸಾಲಿನಲ್ಲಿ ಮಂಡಳಿ ಕಾಯ್ದೆಕಲಂ 17 ರಡಿ ಸ್ವಾಧಿನಪಡಿಸಿಕೊಂಡಿದ್ದು, ಆದರೆ ಆಸ್ತಿ ತೆರಿಗೆ ವಿವರಗಳನ್ನು 2020-21 ನೇ ಸಾಲಿಗೆ ನಿರ್ಧರಣೆ ಮಾಡಿದ್ದು, ಭೂಸ್ವಾಧೀನಪಡಿಸಿಕೊಂಡಿರುವ, ಕೊಳಚೆ ಪ್ರದೇಶ ಜಮೀನು ಭೂಪರಿವರ್ತನೆಯಾಗಿರುವುದು ಕಂಡು ಬಂದಿರುವುದಿಲ್ಲ ಆದ್ದರಿಂದ ಭೂಪರಿಹಾರ ಮೊತ್ತವನ್ನು ಮರು ಪರಿಶೀಲಿಸಲು ಹಾಗೂ 2018 ನೇ ಸಾಲಿಗೆ ಅನ್ವಯವಾಗುವ ಅಂಕಿ ಅಂಶಗಳನ್ವಯ ಭೂಪರಿಹಾರ ಮೊತ್ತವನ್ನು ಮರುನಿಗದಿಪಡಿಸಲು ಕೋರಿರುತ್ತಾರೆ.

18. ಅದರಂತೆ, ಆಯುಕ್ತರು, ಹು-ಧಾ ಮಹಾನಗರ ಪಾಲಿಕೆ ಹುಬ್ಬಳ್ಳಿರವರು ಸದರಿ ಕೊಳಚೆ ಪ್ರದೇಶದ ರಿ.ಸ.ನಂ:37/3ಎ ರಲ್ಲಿ ಕ್ಷೇತ್ರ; 6ಎ-18 ಗುಂ-15 ಆಣೆ ಜಾಗೆಗೆ, ನಿಗಧಿಪಡಿಸಲಾದ ಸನ್-2018-19 ನೇ ಸಾಲಿನ ಆಸ್ತಿ ತೆರಿಗೆ ಮೊತ್ತ ರೂ- 7241/- (ಸೆಸ್ಸುಗಳನ್ನೊಳಗೊಂಡಂತೆ) ಹಾಗೂ ಆಸ್ತಿತೆರಿಗೆ ಮೊತ್ತ ರೂ- 5747/- (ಸೆಸ್ಸುಗಳನ್ನು ಹೊರತುಪಡಿಸಿ) ಹಾಗೂ ರಿ.ಸ.ನಂ-37/2ಬಿ ರಲ್ಲಿನ ಕ್ಷೇತ್ರ:1ಎ-26ಗುಂ-08 ಆಣೆ ಕೊಳಚೆ ಪ್ರದೇಶದ ಸನ್-2018-19 ನೇ ಸಾಲಿನ ಆಸ್ತಿ ತೆರಿಗೆ ಮೊತ್ತರೂ- 3973/- (ಸೆಸ್ಸುಗಳನ್ನೊಳಗೊಂಡಂತೆ) ಹಾಗೂ ಆಸ್ತಿ ತೆರಿಗೆ ಮೊತ್ತ ರೂ- 3153/- (ಸೆಸ್ಸುಗಳನ್ನು ಹೊರತುಪಡಿಸಿ) ಆಗುತ್ತದೆ. ಎಂದು ಕೆಳಗಿನಂತೆ ಆಯಾ ಕ್ಷೇತ್ರಗಳಿಗೆ ಅನ್ವಯವಾಗುವ ಆಸ್ತಿತೆರಿಗೆ ವಿವರ ಪಟ್ಟಿಯನ್ನು ತಯಾರಿಸಿ ಸಲ್ಲಿಸಿರುತ್ತಾರೆ.

ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ		
ನಮೂನೆ-1 (ನಿಯಮ 7 ನೋಡಿ) - ಆಸ್ತಿತೆರಿಗೆವಿವರಪಟ್ಟಿ (Property Tax Return)		
SAS ID:		**Old PID:**
PID:		**Date:**
Old Assesment No		**New Assessment No.:**
Zone Name: 10		**Ward name:63**
Sl. No.	**ವಿವರಣೆ / Field Description**	**ಮೌಲ್ಯ / Value**
1(a)	(ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ) / Owner Name (Kannada)	ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ
1(b)	Owner Name (English)	
2	ಅನುಭೋಗದಾರನ ಹೆಸರು / Occupier Name	
3	ಮಾಲೀಕನ ವಿಳಾಸ / Owner Address	
4	ತೆರಿಗೆ ನಿರ್ಧಾರಣೆ ವರ್ಷ / Assessment Year	2018-19
5	ವಾರ್ಡಿನ ನಂ ಮತ್ತು ಹೆಸರು / Ward Name	
6	ಬೀದಿ ಅಥವಾ ಪ್ರದೇಶದ ಹೆಸರು / Street Name	ರಣದಮ್ಮನಕಾಲನಿ
ಖಾಲೆ ಭೂಮಿ/ Open Land		
7(a)	ನಿವೇಶನದ ನಂ / Site Number	37/3ಎ
7(b)	ಕಟ್ಟಡದ ನಂ / Building Number	
8	ನಿವೇಶನದ ಒಟ್ಟು ವಿಸ್ತೀರ್ಣ / Total Site Area	26,206.50
9	ಕಟ್ಟಡ ಆವರಿಸಿದ ಭೂಮಿಯ ವಿಸ್ತೀರ್ಣ / Area Occupied by Building	
10	ಎಲ್ಲಾ ಅಂತಸ್ತುಗಳೂ ಸೇರಿ ಕಟ್ಟಡ ನಿರ್ಮಾಣವಾಗಿರುವ ಒಟ್ಟು ವಿಸ್ತೀರ್ಣ	
11	Plinth factor (Col 9/Col 10)	
12	ಖಾಲಿ ಭೂಮಿಯ ವಿಸ್ತೀರ್ಣ (No.8-9) / Open Land (No.8-9)	
13	ತೆರಿಗೆಯಿಂದ ವಿನಾಯತಿ ಗರಿಷ್ಟ 1000 ಚದರ ಅಡಿ (92.90)	0
14	ತೆರಿಗೆಗೆ ಒಳಪಡುವ ಒಟ್ಟು ಖಾಲಿ ಜಾಗೆ / Total Taxable Open Land Area	
15	**Open Land Area Breakdown:**	

	ಅ) 1000 ಚ ಮೀವರೆಗೆ/ Upto 1000 sq.mt	1,000
	ಆ) 1000 ರಿಂದ 4000 ಚ ಮೀವರೆಗೆ/ Upto 1000 to 4000 sq.mt	4,000
	ಇ) 4000 ಚ ಮೀ ಮೇಲಪಟ್ಟು/ Above 4000 sq.mt	21,260.50
16(a)	ಭೂಮಿಯ ಅಂದಾಜು ಮಾರುಕಟ್ಟೆ ಬೆಲೆ / EMV Full Value	1,291
16(b)	ಭೂಮಿಯ ಅಂದಾಜು ಮಾರುಕಟ್ಟೆ ಬೆಲೆಯ 50% / EMV Value	646
17	**ಖಾಲಿ ಭೂಮಿಯ ತೆರಿಗೆಗೆ ಗುರಿಯಾಗುವ ಮೂಲ ಮೌಲ್ಯ / Value**	**646**
	ಅ) 1000 ಚ ಮೀವರೆಗೆ/ Upto 1000 sq.mt	6,46,000
	ಆ) 1000 ರಿಂದ 4000 ಚ ಮೀವರೆಗೆ/ Upto 1000 to 4000 sq.mt	25,84,000
	ಇ) 4000 ಚ ಮೀ ಮೇಲಪಟ್ಟು/ Above 4000 sq.mt	1,37,34,283
18	**ಖಾಲಿಭೂಮಿಯತೆರಿಗೆದರ / Tax Rate of Open Land:**	
	ಅ) 1000 ಚ ಮೀವರೆಗೆ/ Upto 1000 sq.mt	0.2156%
	ಆ) 1000 ರಿಂದ 4000 ಚ ಮೀವರೆಗೆ/ Upto 1000 to 4000 sq.mt	0.0539%
	ಇ) 4000 ಚ ಮೀ ಮೇಲಪಟ್ಟು/ Above 4000 sq.mt	0.02156%
19	ಖಾಲಿ ಭೂಮಿಯ ಮೇಲಿನ ಆಸ್ತಿ ತೆರಿಗೆ / Property Tax on Open Land	5,746.66
20	ಕಟ್ಟಡ ಆವರಿಸಿದ ಭೂಮಿಯ ವಿಸ್ತೀರ್ಣ / Area Occupied by Building	
21	ಭೂಮಿಯ ಮೂಲ ಮೌಲ್ಯ Capital Value of Land	0
22	ಕಟ್ಟಡದ ಮಾದರಿ / Building Type	
23(a)	ಕಟ್ಟಡದ ನಿರ್ಮಾಣದ ಚದರಡಿ ಅಂದಾಜು ವೆಚ್ಚ / Slab Rate Full	
23(b)	ಕಟ್ಟಡದ ನಿರ್ಮಾಣದ ಚದರಡಿ ಅಂದಾಜು ವೆಚ್ಚದ 25 %	
24	ಕಟ್ಟಡದ ಏರಿಯಾ / Building Area	
25	ಕಟ್ಟಡದ ನಿರ್ಮಾಣ ವೆಚ್ಚ(ನಂ23(b) x 24)/ Cost of	
26	ಕಟ್ಟಡದ ವಯಸ್ಸು / Age of Building	
27	ಸವಕಳಿ ದರ / Depreciation Rate	
28	ಕಟ್ಟಡದ ಸವಕಳಿ(ನಂ 25 x 27)Amount of Depreciation	
29	ಕಟ್ಟಡದ ತೆರಿಗೆಗೆ ಗುರಿಯಾಗುವ ಮೂಲಮೌಲ್ಯ / Taxable Capital Value	
30	ಸ್ವತ್ತಿನ ಉಪಯೋಗ / Property Usage	Resi (Self)
31	ಆಸ್ತಿತೆರಿಗೆ ದರ / Rate of Property Tax	0.75320%
32	ಕಟ್ಟಡದ ಮೇಲಿನ ಆಸ್ತಿ ತೆರಿಗೆ(ನಂ 29 x 31)Tax on	
33	ವಾಸದ ಮನೆಯಲ್ಲಿ ಸ್ವಂತ ವಾಸವಿದ್ದರೆ (ನಂ.32 ರ 50%)	
34	ಅನಧಿಕೃತ ಕಟ್ಟಡ ಇದ್ದಲ್ಲಿ KMC Act 112C ಪ್ರಕಾರ	
35	**ಖಾಲಿ ಭೂಮಿ ಮತ್ತು ಕಟ್ಟಡ ಆಸ್ತಿತೆರಿಗೆ (ನಂ.19+32or33or34)**	**5,747**
36	ರಿಬೇಟು (5% ರಿಯಾಯ್ತಿ ಏಪ್ರಿಲ್ 30 ರ ಒಳಗೆ) / Rebate	0
37	**ಪಾವತಿ ಮಾಡಬೇಕದ ಒಟ್ಟು ಆಸ್ತಿ ತೆರಿಗೆ (No.35 - 36)**	**5,747**
38	Library Cess(6%), Beggar Cess(3%). Health Cess(15%), Transport Cess	1,494
39	ವಾಹನಶುಲ್ಕ / Vehicle Charge	0
40	ಒಟ್ಟು SWM ಬಳಕೆದಾರರ ಶುಲ್ಕ / Total SWM User Fees	0
41	ಒಟ್ಟು UGD ಬಳಕೆದಾರರ ಶುಲ್ಕ / Total UGD User Fees	0
42	ಒಟ್ಟು ದಂಡ (ಜುಲೈಯಿಂದ ಮಾಸಿಕ 2%) / Total Penalty	0
43	**ಪಾವತಿ ಮಾಡಬೇಕಾದ ಒಟ್ಟು ಮೊಬಲಗು / Total Payable Amount**	**7,241**

ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ		
ನಮೂನೆ-1 (ನಿಯಮ 7 ನೋಡಿ) - ಆಸ್ತಿತೆರಿಗೆವಿವರಪಟ್ಟಿ (Property Tax Return)		
SAS ID:		**Old PID:**
PID: Old Assessment No.:		**Date:**
Old Assesment No		**New Assessment No.:**
Zone Name: 11		**Ward name:67**
Sl. No.	**ವಿವರಣೆ / Field Description**	**ಮೌಲ್ಯ / Value**
1(a)	ಮಾಲೀಕರ ಹೆಸರು / Owner Name (Kannada)	ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ
1(b)	Owner Name (English)	
2	ಅನುಭೋಗದಾರನ ಹೆಸರು / Occupier Name	
3	ಮಾಲೀಕನ ವಿಳಾಸ / Owner Address	
4	ತೆರಿಗೆ ನಿರ್ಧಾರಣೆ ವರ್ಷ / Assessment Year	2018-19
5	ವಾರ್ಡಿನ ನಂ ಮತ್ತು ಹೆಸರು / Ward Name	
6	ಬೀದಿ ಅಥವಾ ಪ್ರದೇಶದ ಹೆಸರು / Street Name	ನೆಕಾರನಗರ
	ಖಾಲಿ ಭೂಮಿ/Open Land	
7(a)	ನಿವೇಶನದ ನಂ / Site Number	37/2ಬಿ
7(b)	ಕಟ್ಟಡದ ನಂ / Building Number	
8	ನಿವೇಶನದ ಒಟ್ಟು ವಿಸ್ತೀರ್ಣ / Total Site Area	6,730.29
9	ಕಟ್ಟಡ ಆವರಿಸಿದ ಭೂಮಿಯ ವಿಸ್ತೀರ್ಣ / Area Occupied by Building	
10	ಎಲ್ಲಾ ಅಂತಸ್ತುಗಳೂ ಸೇರಿ ಕಟ್ಟಡ ನಿರ್ಮಾಣವಾಗಿರುವ ಒಟ್ಟು ವಿಸ್ತೀರ್ಣ	
11	Plinth factor (Col 9/Col 10)	
12	ಖಾಲಿ ಜಾಗ (ನಂ.8-9) / Open Land (No.8-9)	
13	ತೆರಿಗೆಯಿಂದ ವಿನಾಯತಿ ಗರಿಷ್ಟ 1000 ಚದರ ಅಡಿ (92.90)	0
14	ತೆರಿಗೆಗೆ ಒಳಪಡುವ ಒಟ್ಟು ಖಾಲಿ ಜಾಗೆ / Total Taxable Open Land Area	
15	**Open Land Area Breakdown:**	
	ಅ)1000 ಚ ಮೀವರೆಗೆ/ Upto 1000 sq.mt	1,000
	ಆ)1000 ರಿಂದ 4000 ಚ ಮೀವರೆಗೆ/ Upto 1000 to 4000 sq.mt	4,000
	ಇ)4000 ಚ ಮೀ ಮೇಲಪಟ್ಟು/ Above 4000 sq.mt	1,730.29

16(a)	ಭೂಮಿಯ ಅಂದಾಜು ಮಾರುಕಟ್ಟೆ ಬೆಲೆ / EMV Full Value	1,345
16(b)	ಭೂಮಿಯ ಅಂದಾಜು ಮಾರುಕಟ್ಟೆ ಬೆಲೆಯ 50% / EMV Value	673
17	**ಖಾಲಿ ಭೂಮಿಯ ತೆರಿಗೆಗೆ ಗುರಿಯಾಗುವ ಮೂಲಮೌಲ್ಯ / Value for Open Land**	**673**
	ಅ)1000 ಚ ಮೀವರೆಗೆ/ Upto 1000 sq.mt	6,73,000
	ಆ)1000 ರಿಂದ 4000 ಚ ಮೀವರೆಗೆ/ Upto 1000 to 4000 sq.mt	26,92,000
	ಇ)4000 ಚ ಮೀ ಮೇಲಪಟ್ಟು/ Above 4000 sq.mt	11,64,485.17
18	**ಖಾಲಿ ಭೂಮಿಯ ತೆರಿಗೆ ದರ / Tax Rate of Open Land:**	
	ಅ) 1000 ಚ ಮೀವರೆಗೆ/ Upto 1000 sq.mt	0.2156%
	ಆ) 1000 ರಿಂದ 4000 ಚ ಮೀವರೆಗೆ/ Upto 1000 to 4000 sq.mt	0.0539%
	ಇ) 4000 ಚ ಮೀ ಮೇಲಪಟ್ಟು/ Above 4000 sq.mt	0.02156%
19	ಖಾಲಿ ಭೂಮಿಯ ಮೇಲಿನ ಆಸ್ತಿ ತೆರಿಗೆ / Property Tax on Open Land	3,153.04
20	ಕಟ್ಟಡ ಆವರಿಸಿದ ಭೂಮಿಯ ವಿಸ್ತೀರ್ಣ / Area Occupied by Building	
21	ಭೂಮಿಯ ಮೌಲ್ಯಮಾಪನ Capital Value of Land	0
22	ಕಟ್ಟಡದ ಮಾದರಿ / Building Type	
23(a)	ಕಟ್ಟಡದ ನಿರ್ಮಾಣದ ಚದರಡಿ ಅಂದಾಜು ವೆಚ್ಚ / Slab Rate Full	
23(b)	ಕಟ್ಟಡದ ನಿರ್ಮಾಣದ ಚದರಡಿ ಅಂದಾಜು ವೆಚ್ಚದ 25 %	
24	ಕಟ್ಟಡದ ಏರಿಯಾ / Building Area	
25	ಕಟ್ಟಡದ ನಿರ್ಮಾಣ ವೆಚ್ಚ(ನಂ 23(b) x 24)Cost of Building	
26	ಕಟ್ಟಡದ ವಯಸ್ಸು / Age of Building	
27	ಸವಕಳಿ ದರ / Depreciation Rate	
28	ಕಟ್ಟಡದ ಸವಕಳಿ (ನ 25*27) Amount of Depreciation (Col 25 x 27)	
29	ಕಟ್ಟಡದ ತೆರಿಗೆಗೆ ಗುರಿಯಾಗುವ ಮೂಲಮೌಲ್ಯ / Taxable Capital Value	
30	ಸ್ವತ್ತಿನ ಉಪಯೋಗ / Property Usage	Resi (Self)
31	ಆಸ್ತಿ ತೆರಿಗೆ ದರ / Rate of Property Tax	0.75320%
32	ಕಟ್ಟಡದ ಮೇಲಿನ ಆಸ್ತಿ ತೆರಿಗೆ (ನಂ 29*31) Tax on Building	
33	ವಾಸದ ಮನೆಯಲ್ಲಿ ಸ್ವಂತ ವಾಸವಿದ್ದರೆ (ನಂ.32 ರ 50%)	
34	ಅನಧಿಕೃತ ಕಟ್ಟಡ ಇದ್ದಲ್ಲಿ KMC Act 112C ಪ್ರಕಾರ	
35	ಖಾಲಿ ಭೂಮಿ ಮತ್ತು ಕಟ್ಟಡ ಆಸ್ತಿ ತೆರಿಗೆ (ನಂ.19+32or33or34)	**3,153**
36	ರಿಬೇಟು (5% ರಿಯಾಯ್ತಿ ಏಪ್ರಿಲ್ 30 ರ ಒಳಗೆ) / Rebate	0
37	ಪಾವತಿ ಮಾಡಬೇಕದ ಒಟ್ಟು ಆಸ್ತಿ ತೆರಿಗೆ (No.35 - 36)	3,153

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

38	Library Cess(6%), Beggar Cess (3%), Health Cess(15%), Transport Cess	820
39	ವಾಹನ ಶುಲ್ಕ / Vehicle Charge	0
40	ಒಟ್ಟು SWM ಬಳಕೆದಾರರ ಶುಲ್ಕ / Total SWM User Fees	0
41	ಒಟ್ಟು UGD ಬಳಕೆದಾರರ ಶುಲ್ಕ / Total UGD User Fees	0
42	ಒಟ್ಟು ದಂಡ (ಜುಲೈಯಿಂದ ಮಾಸಿಕ 2%) / Total Penalty	0
43	ಪಾವತಿ ಮಾಡಬೇಕಾದ ಒಟ್ಟು ಮೊಬಲಗು / Total Payable Amount	3,973

ವಿಚಾರಣೆಯಿಂದ, ಪಡೆಯಲಾದ ಹೇಳಿಕೆಗಳು ಮತ್ತು ದಾಖಲೆಗಳಿಂದ , ಆದೇಶಗಳು/ಸುತ್ತೋಲೆಗಳು ಹಾಗೂ ಕಾಯ್ದೆಗಳ ಪರೀಶೀಲನೆಯಿಂದ ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನೆ) ಕಾಯ್ದೆ 1973 ರ ಕಲಂ-20 ರನ್ವಯ ಭೂಪರಿಹಾರದ ಮೊತ್ತವನ್ನು ಈ ಕೆಳಗಿನಂತೆ ನಿಗದಿಪಡಿಸಿದೆ.

ಷೆಡ್ಯೂಲ್

ಕೊಳಚೆ ಪ್ರದೇಶದ ಹೆಸರು	ಭೂಮಾಲೀಕರುಗಳ ಹೆಸರು	ರಿ.ಸನಂ	ವಿಸ್ತೀರ್ಣ (ಎ-ಗು)	ವಿಸ್ತೀರ್ಣ (ಚ.ಮೀ)	ನಿಗದಿಪಡಿಸಲಾದ ಪರಿಹಾರ ಮೊತ್ತ (ಆಸ್ತಿತೆರಿಗೆ 300 ಪಟ್ಟು)
ಅಯೋಧ್ಯಾ ಗ್ರಾಮದ ನೇಕಾರ ನಗರ	ಶ್ರೀ ತಳವಾರ ಹನುಮಂತಪ್ಪ ನಿಂಗಪ್ಪ	37/3ಎ	6ಎ-00 ಗುಂ-00 ಆಣೆ	24,281.14 ಚ.ಮೀ.	16,02,600/-
	1. ಶ್ರೀಮತಿ ತಳವಾರ ಫಕ್ಕೀರವ್ವ ಕೋಂ ಮಲ್ಲೇಶಪ್ಪ 2. 1. ನಿಂಗಪ್ಪ 2. ಮಹಾದೇವಪ್ಪ 3. ಅಕ್ಕಮಹಾದೇವಿ ಅ.ಸ.ತಾಯಿ ಫಕ್ಕೀರವ್ವಾ 3. ಗಂಗವ್ವ ಕೋಂ ನಿಂಗಪ್ಪ	37/2ಬಿ	1ಎ-26 ಗುಂ-08 ಆಣೆ	6730.29 ಚ.ಮೀ.	9,45,900/-
ಒಟ್ಟೂ			7ಎ-26 ಗುಂ-08 ಆಣೆ	31011.43 (ಚ.ಮೀ.)	25,48,500/-

ಮೇಲಿನ ಕೋಷ್ಟಕದಲ್ಲಿ ತಿಳಿಸಿದಂತೆ, ಪರಿಹಾರ ಧನವನ್ನು ನಿಗದಿಪಡಿಸಲಾಯಿತು, ತೀರ್ಪನ್ನು ದಿನಾಂಕ: 24/08/2026 ರಂದು ಘೋಷಿಸಲಾಗಿದೆ

ಜಿಲ್ಲಾಧಿಕಾರಿ, ಧಾರವಾಡ

PR - 461

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಸರ್ಕಾರಿ ವಿಭಾಗೀಯ ಮುದ್ರಣಾಲಯ, ಧಾರವಾಡ.